www.divinegen.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 7 ಸಂಚಿಕೆ -4 ಮಾರ್ಚ್ 2012
Volume : VII Issue : IV March 2012

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Devine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಪ್ರಕಟಣೆ
2. ವಯಸ್ಕರ ಸ್ವರ
3. ನೀರಿನ ದೀಕ್ಷಾಸ್ನಾನ
4. ಆರೋಗ್ಯಸ್ವರ
5. ಆವ್ರ್
6. ಪ್ರಾರ್ಥನಾ ಮನವಿ
7. ತಿಳುವಳಿಕೆಯ ಸ್ವರ – ವ್ಯಾಮೋಹ ಮತ್ತು ಬಂಧನಗಳು
8. ಅನಾಥರ ಸ್ವರ
9. ಪ್ರಶ್ನೋತ್ತರಗಳ ಸ್ವರ
10. ನಮ್ಮ ಪ್ರಶ್ನೆ ನಿಮ್ಮ ಉತ್ತರ
11. ಸಂಗ್ ಡ್ಯೂ "ಎರಡು ಸಾರಿ ಮರಣ ಹೊಂದಿದ ರಕ್ತಸಾಕ್ಷಿ"
12. ರಕ್ಷಣೆಯ ಮಾರ್ಗ ಯಾವದು?
13. ಪ್ರಾರ್ಥನಾ ಸ್ವರ
14. ಸ್ಥಳೀಯ ಮತ್ತು ವಿದೇಶ ಸುದ್ಧಿ
15. ಮಕ್ಕಳ ಸ್ವರ
16. ಸಂತೋಷವುಳ್ಳ ಕುಟುಂಬ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಮಧುರ ನಾಮದಲ್ಲಿ ಕ್ರಿಸ್ತನಲ್ಲಿ ಪ್ರೀತಿಯ ಸಹೋದರ ಸಹೋದರಿಯರೆಲ್ಲರಿಗೂ ನನ್ನ ವಂದನೆಗಳು. ದೇವರ ಸುವಾರ್ತೆಯನ್ನು ಇಡೀ ಲೋಕಕ್ಕೆ ಸಾರುವಂತಹ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ (ಮತ್ತಾ. 28:18–20). ಇಂದು ಈ ಲೋಕದಲ್ಲಿ ತಪ್ಪಾದ ಮಾರ್ಗದಲ್ಲಿ ಹೋಗುವವರಿಗೆ ವಿರೋಧವಿಲ್ಲ. ಹೆಂಡ ಕುಡಿಯುವವರು, ಹೆಂಡತಿ ಮಕ್ಕಳನ್ನು ಹೊಡೆಯುವವರು, ಮಾಟ ಮಂತ್ರ ಮಾಡುವವರು, ಗೂಂಡಗಿರಿ ಮಾಡುವವರು, ಕಳ್ಳರು, ದರೋಡೆಕೋರರು, ವಂಚಕರು, ಮೋಸಗಾರರು, ವ್ಯಭಿಚಾರಿಗಳು, ಜಾರರು, ನೈಟ್ ಕ್ಲಬ್‌ಗಳು ಇಂಥದನ್ನು ನಡೆಸುವವರಿಗೆ ವಿರೋಧ ಇಲ್ಲ. ದೇವರ ವಾಕ್ಯವನ್ನು ಸಾರುವವರಿಗೆ ಇವತ್ತು ವಿರೋಧವಿದೆ. ಇಂದು ಅನೇಕ ಜನರು ದೇವರ ವಾಕ್ಯ ಕೇಳಿ ಪಾಪಗಳಿಗೆ ಮಾನಸಾಂತರಪಟ್ಟು ಒಳ್ಳೆಯ ವ್ಯಕ್ತಿಗಳಾಗುತ್ತಾರೆ, ಲೂಟಿ, ಕೊಲೆ, ದರೋಡೆ, ಕಳ್ಳತನ, ವಂಚನೆ, ಮೋಸ, ಗೂಂಡಗಿರಿ ಮಾಡುವಂಥ ವ್ಯಕ್ತಿ ಅದರಲ್ಲಿ ನಾನು ಕೂಡ ಒಬ್ಬನಾಗಿದ್ದೇನೆ. ನನ್ನ ಮತ, ಧರ್ಮ, ಆಚರಣೆ ಮಾಡಲಿಕ್ಕೆ ಸಾಧ್ಯಾವಾಗದ್ದನ್ನು ದೇವರ ವಾಕ್ಯದ ಮೂಲಕ ಕರ್ತನಾದ ಯೇಸುಕ್ರಿಸ್ತನು ಮಾಡಿದನು. ಪ್ರತಿಯೊಬ್ಬರಿಗೂ ನನ್ನ ಸಲಹೆ ಯಾರೂ ಕೂಡ ಮತಾಂತರವಾಗಬೇಡಿ ಆದರೆ ಮಾನಸಾಂತರ ಆಗಿರಿ. ನಮ್ಮೆಲ್ಲರ ಹೃದಯದಲ್ಲಿ ಪರಿವರ್ತನೆ ಆಗಲಿ. ಯೇಸುಕ್ರಿಸ್ತನು ಜನರನ್ನು ಮತಾಂತರಗೊಳಿಸಿ ಎಂದು ಯಾರಿಗೂ ಹೇಳಲಿಲ್ಲ. ದೇವರ ವಾಕ್ಯದ ಶುಭ ಸಂದೇಶ ಸಾರಿ ಜನರನ್ನು ನನ್ನ ಶಿಷ್ಯರನ್ನಾಗಿ ಮಾಡಿ ಎಂದು ಹೇಳಿದ್ದಾನೆ. ಜನರ ಹೃದಯಗಳನ್ನು ಬದಲಾಯಿಸುವ ಹಾಗೂ ನಿತ್ಯಜೀವದ ನಿರೀಕ್ಷೆಯನ್ನುಂಟು ಮಾಡುವ ಈ ದೇವರ ವಾಕ್ಯ ಪ್ರತಿಯೊಂದು ವ್ಯಕ್ತಿಗಳ ಬಳಿಗೆ ಹೋಗಲು ಸಹಕರಿಸಿರಿ. ಜನರು ಪಾಪದ ಶಿಕ್ಷೆಯಾದ ನಿತ್ಯ ನರಕದಿಂದ ಬಿಡುಗಡೆ ಹೊಂದಿ ನಿತ್ಯಜೀವಿತಕ್ಕೆ ಸೇರಲಿಕ್ಕಾಗುವಂತೆ ನಾವೆಲ್ಲ ಪ್ರಯಾಸ ಪಡೋಣ. ಒಳ್ಳೆ ಕೆಲಸ ಮಾಡುವಾಗ ಸೈತಾನ ಇಷ್ಟಪಡುವುದಿಲ್ಲ ಹಾಗೂ ಅವನ ರಾಜ್ಯ ನಾಶವಾಗುತ್ತದೆ. ಅದಕ್ಕಾಗಿ ಜನರ ಬಳಿಗೆ ಸುವಾರ್ತೆ ಹೇಳುವಾಗ ವಿರೋಧ ತರುವುದು, ಮತಾಂತರಿಗಳು ಎಂದು ಬಿಂಬಿಸುವುದು, ಹಣದಾಸೆ ತೋರಿಸುತ್ತಾರೆ ಎಂದು ಸುಳ್ಳಿನ ಬೀಜಗಳನ್ನು ಬಿತ್ತುತ್ತಾನೆ. ಒಂದು ಮಾತ್ರ ಸತ್ಯ **"ಇದರಲ್ಲಿ ನಾನು ಕಷ್ಟವನ್ನನುಭವಿಸಿ ದುಷ್ಕರ್ಮಿಯಂತೆ ಸಂಕೋಲೆಯಿಂದ ಕಟ್ಟಲ್ಪಟ್ಟವನಾಗಿದ್ದೇನೆ"**. ( 2 ತಿಮೊ. 2:9 )ಆದರೆ ದೇವರ ವಾಕ್ಯಕ್ಕೆ ಬಂಧನವಿಲ್ಲ, ಹಣ, ಆಮಿಷ, ಮತ, ಧರ್ಮ ಆಚರಣೆ ಮಾಡದ್ದನ್ನು ಕರ್ತನಾದ ಯೇಸುಕ್ರಿಸ್ತನು ಮಾಡುತ್ತಾನೆ, ಮಾಡಿದ್ದಾನೆ–ಮಾಡುತ್ತಾ ಇರುತ್ತಾನೆ. ಆತನ ನಾಮಕ್ಕೆ ಯುಗ ಯುಗಾಂತರಗಳಲ್ಲಿಯೂ ಸ್ತೋತ್ರವಾಗಲಿ ಆಮೆನ್.

*ಹಿರಿಯ ಸಂಪಾದಕ*

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

1) **ಲೂಸಿಫರ್‌ನ ಪರದೈಸು (ಯೆಶಾ. 14:12–14): "ಆಹಾ, ಉದಯನಕ್ಷತ್ರವೇ, ಬೆಳ್ಳಿಯೇ, ಆಕಾಶದಿಂದ ಹೇಗೆ ಬಿದ್ದೆ! ಜನಾಂಗಗಳನ್ನು ಕೆಡವಿದ ನೀನು ಕಡಿಯಲ್ಪಟ್ಟು ನೆಲಕ್ಕೆ ಉರುಳಿದೆಯಲ್ಲಾ! ನೀನು ನಿನ್ನ ಮನಸ್ಸಿನಲ್ಲಿ ನಾನು ಆಕಾಶಕ್ಕೆ ಹತ್ತಿ ಉತ್ತರದಿಕ್ಕಿನ ಕಟ್ಟಕಡೆಯಿರುವ ಸುರಗಣ ಪರ್ವತದಲ್ಲಿ ನನ್ನ ಸಿಂಹಾಸನವನ್ನು ದೇವರ ನಕ್ಷತ್ರಗಳಿಗಿಂತ ಮೇಲೆ ಏರಿಸಿ ಆಸೀನನಾಗುವೆನು; ಉನ್ನತ ಮೇಘಮಂಡಲದ ಮೇಲೆ ಏರಿ ಉನ್ನತೋನ್ನತನಿಗೆ ಸರಿಸಮಾನನಾಗುವೆನು ಅಂದು ಕೊಂಡಿದ್ದೆಯಲ್ಲಾ".**

ಇದು ಪರಲೋಕದ ಉನ್ನತ ಸ್ಥಾನದಲ್ಲಿರುವಂಥ ಪರಿಶುದ್ಧನೂ ಪವಿತ್ರನೂ ಮಹಾಮಹಿಮನೂ ಆಗಿರುವ ತಂದೆಯಾದ ದೇವರನ್ನು ಆರಾಧಿಸುವಂತಹ ದೇವದೂತರ ಆರಾಧನಾ ನಾಯಕನಾಗಿದ್ದತಂಹ ಲೂಸಿಫರನ ಬಗ್ಗೆ ತಿಳಿಸುವ ಮಾತುಗಳಾಗಿವೆ.

ಯೆಹೆ. 28:11–16 **"ಯೆಹೋವನು ಇನ್ನೊಂದು ವಾಕ್ಯವನ್ನು ನನಗೆ ದಯಪಾಲಿಸಿದನು ನರಪುತ್ರನೇ, ನೀನು ತೂರಿನ ಅರಸನ ವಿಷಯದಲ್ಲಿ ಶೋಕಗೀತವನ್ನೆತ್ತು, ಅವನಿಗೆ ಹೀಗೆ ನುಡಿ ಕರ್ತನಾದ ಯೇಹೋವನು ಇಂತೆನ್ನುತ್ತಾನೆ ನೀನು ಸರ್ವಸುಲಕ್ಷಣ ಶಿರೋಮಣಿ, ಪೂರ್ಣ ಜ್ಞಾನಿ, ಪರಿಪೂರ್ಣಸುಂದರ. ದೇವರ ಉದ್ಯಾನವನವಾದ ಏದೆನಿನಲ್ಲಿ ನೀನಿದ್ದಿ; ಮಾಣಿಕ್ಯ ಪುಷ್ಪರಾಗ ಪಚ್ಚೆ ಪೀತರತ್ನ ಬೆರುಲ್ಲ ವೈಡೂರ್ಯ ನೀಲಕೆಂಪೆರಲು ಸ್ಫಟಿಕ ಈ ನವರತ್ನಗಳಿಂದ ಭೂಷಿತವಾಗಿದ್ದಿ; ನಿನ್ನಲ್ಲಿನ [ಈ ರತ್ನಗಳ] ಗೂಡುಗಳೂ ಮನೆಗಳೂ ಸುವರ್ಣರಚಿತವಾಗಿದ್ದವು; ನಿನ್ನ ಸೃಷ್ಟಿಯ ದಿನದಲ್ಲಿ ಸಿದ್ಧವಾದವು. ನೀನು ರೆಕ್ಕೆ ತೆರೆದು ನೆರಳು ಕೊಡುವ ಕೆರೂಬಿಯಾಗಿದ್ದಿ; ನಾನು ನಿನ್ನನ್ನು ದೇವರ ಪರಿಶುದ್ಧ ಪರ್ವತದಲ್ಲಿ ನೆಲೆಗೊಳಿಸಿದೆನು; ನೀನು ಕೆಂಡದ ಮಳೆಯಲ್ಲಿ ವಿಹಾರ ಮಾಡುತ್ತಾ ಇದ್ದಿ. ನಿನ್ನ ಸೃಷ್ಟಿಯ ದಿನದಿಂದ ನಿನ್ನಲ್ಲಿ ಅಪರಾಧವು ಸಿಕ್ಕುವ ತನಕ ನಿನ್ನ ನಡತೆಯು ನಿರ್ದೋಷವಾಗಿ ಕಾಣುತ್ತಿತ್ತು. ನಿನ್ನ ಮಿತಿಯಿಲ್ಲದ ವ್ಯಾಪಾರದಿಂದ ನಿನ್ನಲ್ಲಿ ಬಲಾತ್ಕಾರವು ತುಂಬಿ ನೀನು ಪಾಪಿಯಾದಿ. ಆದಕಾರಣ ನಾನು ನಿನ್ನನ್ನು ದೇವರ ಪರ್ವತದಿಂದ ಹೊಲಸನ್ನಾಗಿ ತಳ್ಳಿಬಿಟ್ಟೆನು; ಹೌದು ನೆರಳುಕೊಡುವ ಕೆರೂಬಿಯೇ, ಕೆಂಡದ ಮಳೆಯ ಮಧ್ಯದಲ್ಲಿನ ನಿನ್ನ ನೆಲೆಯಿಂದ ನಾನು ನಿನ್ನನ್ನು ಕಿತ್ತು ಧ್ವಂಸ ಮಾಡಿದೆನು".** ಇದು ಲೂಸಿಫರನು ದೇವ ಸಮ್ಮುಖದಿಂದ ತಳ್ಳಲ್ಪಡುವ ಮೊದಲು ಆತನು ವಾಸಮಾಡುವ ಸ್ಥಳವಾಗಿತ್ತು. ಈ ಪರದೈಸಿಗೆ ಕೊಡಲ್ಪಟ್ಟ ಹೆಸರನ್ನು ಇದರಲ್ಲಿ ನಾವು ಕಾಣಬಹುದು.

1. ದೇವರ ಉದ್ಯಾನ ವನ (ಯೆಹೆ. 28:13).
2. ಏದೆನ್ (ಯೆಹೆ.28:13).
3. ದೇವರ ಪರಿಶುದ್ಧ ಪರ್ವತ (ಯೆಹೆ. 28:14).
4. ಕೆಂಡದ ಮಳೆಯಲ್ಲಿನ ವಿಹಾರ (ಯೆಹೆ. 28:14).
5. ದೇವರ ಪರ್ವತ (ಯೆಹೆ. 28:16).
6. ಕೆಂಡದ ಮಳೆಯ ಮಧ್ಯದಲ್ಲಿನ ನೆಲೆ (ಯೆಹೆ. 28:16).
7. ಮಾಣಿಕ್ಯ ಪುಷ್ಯರಾಗ ಪಚ್ಚೆ ಪೀತರತ್ನ ಬೆರುಲ್ಲ ವೈಡೂರ್ಯ ನೀಲ ಕೆಂಪರಲು ಸ್ಫಟಿಕ ಈ ನವರತ್ನಗಳಿಂದ ಭೂಷಿತವಾಗಿದ್ದಿ; ನಿನ್ನಲ್ಲಿನ [ಈ ರತ್ನಗಳ] ಗೂಡುಗಳೂ ಮನೆಗಳೂ ಸುವರ್ಣ ರಚಿತವಾಗಿದ್ದವು (ಯೆಹೆ. 28:13).

2) **ಪರಲೋಕದ ಪರದೈಸು** (2 ಕೊರಿ. 12:2–5): ಕ್ರಿಸ್ತನಲ್ಲಿದ್ದ ಒಬ್ಬ ಮನುಷ್ಯನನ್ನು ಬಲ್ಲೆನು ಅವನು ಹದಿನಾಲ್ಕು ವರ್ಷಗಳ ಹಿಂದೆ ಮೂರನೆಯ ಆಕಾಶದ ಪರ್ಯಂತರಕ್ಕೂ ಒಯ್ಯಲ್ಪಟ್ಟನು. ಅವನು ದೇಹ ಸಹಿತನಾಗಿ ಒಯ್ಯಲ್ಪಟ್ಟನೋ ದೇಹರಹಿತನಾಗಿ ಒಯ್ಯಲ್ಪಟ್ಟನೋ ನಾನರಿಯೇ ದೇವರೇ ಬಲ್ಲನು. ಅಂಥ ಮನುಷ್ಯನು ಪರದೈಸಕ್ಕೆ ಒಯ್ಯಲ್ಪಟ್ಟು ಮನುಷ್ಯರು ನುಡಿಯಲಸಕ್ಯವಾದ ಹೇಳಬಾರದ ಮಾತುಗಳನ್ನು ಕೇಳಿದನೆಂದು ಬಲ್ಲೆನು. ಆ ಸಮಯದಲ್ಲಿ ಅವನು ದೇಹಸಹಿತನಾಗಿದ್ದನೋ ದೇಹರಹಿತನಾಗಿದ್ದನೋ ದೇವರೇ ಬಲ್ಲನು. ಇದು ಪರಲೋಕದ ಪರದೈಸಿನ ಬಗ್ಗೆ ತಿಳಿಸುವ ಮಾತುಗಳಾಗಿವೆ. ಪರದೈಸಿನ ಬಗ್ಗೆ ಈಗ ವಿವರವಾಗಿ ಹೇಳದೆ. ಪ್ರಕಟಣೆ ಪುಸ್ತಕದ 4ನೇ ಅಧ್ಯಾಯ ಬರುವಾಗ ವಿವರಿಸುತ್ತೇನೆ.

3) **ಏದೆನೆಂಬ ಪರದೈಸು** (ಆದಿಕಾಂಡ. 2:8) – ಇದಲ್ಲದೆ ಯೆಹೋವ ದೇವರು ಮೂಡಣದಿಕ್ಕಿನಲ್ಲಿರುವ ಏದೆನ್ ಸೀಮೆಯಲ್ಲಿ ಒಂದು ಉದ್ಯಾನವನ್ನು ಮಾಡಿ ತಾನು ರೂಪಿಸಿದ ಮನುಷ್ಯನನ್ನು ಅದರಲ್ಲಿ ಇರಿಸಿದನು.

**ಏದೆನ್ ಎಂಬ ಪರದೈಸಿನ ವಿಶೇಷತೆ ಏನು**

1) ನೋಟಕ್ಕೆ ರಮ್ಯವಾಗಿಯೂ ಊಟಕ್ಕೆ ಅನುಕೂಲವಾಗಿಯೂ ಇರುವ ಎಲ್ಲಾ ತರದ ಮರಗಳು ಇದ್ದವು (ಆದಿ.2:9)
2) ಜೀವದಾಯಕ ವೃಕ್ಷವಿತ್ತು (ಆದಿ. 2:9).
3) ಏದೆನ್ ಸೀಮೆಯಲ್ಲಿ ಒಂದು ನದಿ ಇತ್ತು (ಆದಿ. 2:10–14).
4) ಮನುಷ್ಯನು ತೋಟದಲ್ಲಿರುವ (ಒಳಿತು ಕೆಡುಕುಗಳ ಅರುಹನ್ನುಂಟು ಮಾಡುವ ಮರ ಬಿಟ್ಟು) ಎಲ್ಲಾ ತರದ

ನಿನ್ನ ಕೃಪೆಯಿಂದ ಸಂವತ್ಸರಕ್ಕೆ ಸುಭಿಕ್ಷಕಿರೀಟವನ್ನು ಇಟ್ಟಿದ್ದೀ; ನೀನು ಹಾದುಹೋಗುವ ಮಾರ್ಗದಲ್ಲೆಲ್ಲಾ ಸಮೃದ್ಧಿಕರವಾದ ವೃಷ್ಟಿಯು ಸುರಿಯುವದು (ಕೀರ್ತ. 65:11).

ಮರದ ಹಣ್ಣನ್ನು ತಿನ್ನಬಹುದಿತ್ತು.

5) ಮನುಷ್ಯನು ನಿಷ್ಕಳಂಕನಾಗಿದ್ದನು.

6) ಮನುಷ್ಯನಿಗೆ ಸರಿಯಾದ ಸಹಕಾರಿಯನ್ನು ದೇವರು ಉಂಟು ಮಾಡಿದನು (ಆದಿ. 2:18–25).

7) ಪಾಪ ಇರಲಿಲ್ಲ.

8) ಶಾಪ ಇರಲಿಲ್ಲ.

9) ರೋಗ ಇರಲಿಲ್ಲ.

10) ಮರಣ ಇರಲಿಲ್ಲ.

11) ದುಃಖ, ನೋವು, ವೇದನೆ ಇರಲಿಲ್ಲ.

12) ದೇವರೊಂದಿಗೆ ಮನುಷ್ಯನು ಅನ್ಯೋನ್ಯವಾಗಿದ್ದನು.

13) ಮನುಷ್ಯನನ್ನು ದೇವರ ಮಹಿಮೆ ಆವರಿಸಿಕೊಂಡಿತ್ತು.

14) ಮನುಷ್ಯನು ದೇವರನ್ನು ಘನಪಡಿಸುತ್ತಿದ್ದನು. (ಯೆಶಾ. 43:7).

15) ಮನುಷ್ಯನನ್ನು ಕರ್ತನು ಆಶೀರ್ವದಿಸಿದ್ದನು. ಆದಿ. 1:26–28, ಮನುಷ್ಯನ ಮೇಲೆ ದೇವರ ಆಶೀರ್ವಾದ ನೆಲೆಗೊಂಡಿತ್ತು.

16) ಮನುಷ್ಯನು ಸಂತೋಷವಾಗಿದ್ದನು.

17) ಮನುಷ್ಯನು ಭೂಮ್ಯಾಕಾಶಗಳಲ್ಲಿರುವ ಸಮಸ್ತವನ್ನು ಆಳುತ್ತಿದ್ದನು (ಆದಿ. 1:28, ಆದಿ 2:19–20).

18) ಮನುಷ್ಯನಿಗೆ ಯಾವುದರ ಕುರಿತು ಭಯ ಇರಲಿಲ್ಲ.

19) ಕ್ರೂರವಾದ ಕಾಡು ಪ್ರಾಣಿಗಳಲ್ಲಿ ಕ್ರೂರತನ ಇರಲಿಲ್ಲ.

20) ಮನುಷ್ಯನು ದೇವರೊಂದಿಗೆ ಸಂಚರಿಸುತ್ತಿದ್ದನು.

**4) ಹಳೆ ಒಡಂಬಡಿಕೆಯಲ್ಲಿ ಸತ್ತಂತಹ ಭಕ್ತರ ಆತ್ಮಗಳು ವಿಶ್ರಮಿಸುವ ಪರದೈಸು (ಆದಿ. 37:35)** : ಅವನ ಗಂಡು ಮಕ್ಕಳು, ಹೆಣ್ಣು ಮಕ್ಕಳು ಎಲ್ಲರೂ ದು:ಖ ಶಮನ ಮಾಡುವುದಕ್ಕೆ ಪ್ರಯತ್ನಿಸಿದಾಗ್ಯೂ ಅವನು ಶಾಂತಿಯನ್ನು ಹೊಂದಲೊಲ್ಲದೆ ನಾನು ಹೀಗೆ ಹಂಬಲಿಸುತ್ತಾ ನನ್ನ ಮಗನಿರುವ ಪಾತಾಳವನ್ನು ಸೇರುವೆನು ಅಂದನು. ಹೀಗೆ ತಂದೆಯು ಮಗನಿಗೋಸ್ಕರ ಅಳುತ್ತಿದ್ದನು. ಈ ವಾಕ್ಯದ ಆಧಾರದಲ್ಲಿ ನಾವು ಕಲಿಯುವ ಸಂಗತಿ ಏನೆಂದರೆ, ಯಾಕೋಬನು ದೇವರ ಯಥಾರ್ಥವಾದ ಭಕ್ತನಾಗಿದ್ದನು, ಅವನ ಮಗನಾದ ಯೋಸೇಫನು, ಯಾಕೋಬನು ದೇವರ ಯಥಾರ್ಥವಾದ ಭಕ್ತನಾಗಿದ್ದನು. ಯಾಕೋಬನು ಅವನ ಮಗನಾದ ತನ್ನ 17 ಮಂದಿ ಮಕ್ಕಳಲ್ಲಿ ಕೊನೆಯವನಾದ ಯೋಸೇಫನನ್ನು ಹೆಚ್ಚಾಗಿ ಪ್ರೀತಿಸುತ್ತಿದ್ದನು. ಇದನ್ನು ಉಳಿದ 11 ಮಂದಿ ಮಕ್ಕಳು ಸಹಿಸುತ್ತಾ ಇರಲಿಲ್ಲ. ಇದಕ್ಕೆ ಎರಡು ಕಾರಣಗಳಿದ್ದವು.

1. ಯಾಕೋಬನು ಇತರ ಮಕ್ಕಳಿಗಿಂತ ಹೆಚ್ಚು ಯೋಸೇಫನನ್ನು ಪ್ರೀತಿಸುತ್ತಿದ್ದನು.

2. ಯೋಸೇಫನ ಕನಸುಗಳು.

ಕೊನೆಗೆ ಯೋಸೇಫನ ಅಣ್ಣಂದಿರು ಯೋಸೇಫನಿಗೆ ವಿರುದ್ಧವಾಗಿ ಸಂಚು ಮಾಡಿ ಅವನನ್ನು ಕೊಲೆ ಮಾಡಬೇಕೆಂದಿದ್ದರೂ ಮತ್ತೆ ಮನಸ್ಸು ಬದಲಾಯಿಸಿ ಅವನನ್ನು ಇಸ್ರಾಯೇಲರಿಗೆ ಮಾರಿಬಿಟ್ಟರು. ಅವರ ನಂತರ ಯೋಸೇಫನ ಬಟ್ಟೆಗಳಿಗೆ ಒಂದು ಮೃಗದ ರಕ್ತವನ್ನು ಅದ್ದಿ ತಂದೆಯ ಬಳಿಗೆ ತಂದು ನಿನ್ನ ಮಗನನ್ನು ಕಾಡು ಮೃಗಕೊಂದು ಹಾಕಿದೆ ಇದು ಅವನ ಬಟ್ಟೆಗಳು ಎಂದು ಹೇಳಿ ತೋರಿಸಿದರು. ಯೋಸೇಫನ ಬಟ್ಟೆಗಳನ್ನು ಗುರುತಿಸಿದ ತಂದೆಯಾದ ಯಾಕೋಬನು ಅತ್ತು ತನ್ನ ಮಗನಾದ ಯೋಸೇಫನು ಸತ್ತು ಪಾತಳಕ್ಕೆ ಹೋಗಿದ್ದಾನೆ, ತಾನೂ ಮಗನು ಸತ್ತ ದು:ಖದಲ್ಲಿ ಸತ್ತು ಮಗನಿರುವ ಪಾತಾಳಕ್ಕೆ ಹೋಗುತ್ತೇನೆ ಎಂದು ಹೇಳುತ್ತಾ ಇದ್ದಾನೆ. ಇಲ್ಲಿ ಪ್ರಶ್ನೆ ಏನೆಂದರೆ ಒಬ್ಬ ದೇವ ಭಕ್ತನಿಗೆ ಸತ್ತ ನಂತರ ಸೇರಬೇಕಾದ ಸ್ಥಳ ಪಾತಳವೇ, ಯಾಕೋಬ, ಯೋಸೇಫರಂತವರಿಗೆ ವಿಶ್ರಾಂತಿ ಸ್ಥಳವೇ ಇದನ್ನು ನಾವು ಸವಿವರವಾಗಿ ಕಲಿಯೋಣ.

ಭೂಮಿಯ ಕೆಳಗಿನ ಭಾಗಕ್ಕೆ ಇಬ್ರಿಯ ಹಾಗೂ ಗ್ರೀಕ್ ಭಾಷೆಯಲ್ಲಿ ಬೇರೆ ಬೇರೆ ಪದಗಳಿವೆ. ಇಬ್ರಿಯದಲ್ಲಿ ಭೂಮಿಯ ಕೆಳಗಿನ ಭಾಗಕ್ಕೆ ಶಿಯೋಲ್ SHIOL (ಧರ್ಮೋ. 32–22). ಎಂದು ಗ್ರೀಕ್‌ನಲ್ಲಿ ಭೂಮಿಯ ಕೆಳಗಿನ ಭಾಗಕ್ಕೆ ಹೆಡ್ಸ್ (HADES) ಎಂಬುದಾಗಿ ಹೆಸರು. ಮತ್ತಾ. 11:23 ರಲ್ಲಿ ನೋಡಬಹುದು. ಕನ್ನಡದಲ್ಲಿ shiol ಹಾಗೂ Hades ಎಂಬ ಪದದ ಅರ್ಥ ಪಾತಾಳ ಎಂಬುದಾಗಿದೆ.

ಭೂಮಿಯ ಕೆಳಗಿನ ಭಾಗದಲ್ಲಿ ಸಿಗುವ ಮೊದಲಿನ ಸೆಲ್ (Sell) ಭೂಮಿಯ ಕೆಳಗಿನ ಭಾಗಕ್ಕೆ ಅಥವಾ ಮೊದಲಿನ ಹಂತಕ್ಕೆ ಪರದೈಸು ಎಂಬುದಾಗಿ ಕರೆಯುತ್ತಾರೆ. ಈ ಭಾಗದಲ್ಲಿ ಹಳೆ ಒಡಂಬಡಿಕೆಯಲ್ಲಿ ಸತ್ತು ಹೋದ ಭಕ್ತರ ಆತ್ಮಗಳು ವಿಶ್ರಮಿಸುವ ಸ್ಥಳವೇ ಇದಾಗಿದೆ. ಅದಕ್ಕಾಗಿಯೇ ಯಾಕೋಬನು ತನ್ನ ಮಗನಾದ ಯೊಸೇಫನು ಸತ್ತು ಪಾತಾಳಕ್ಕೆ ಸೇರಿದ್ದಾನೆ ತಾನೂ ಸತ್ತು ತನ್ನ ಮಗನಿರುವ ಪಾತಾಳಕ್ಕೆ ಸೇರುವೆನು ಎಂಬುದಾಗಿ ಹೇಳಿದನು.

ಮುಂದುವರಿಯುವದು....

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

ಯೆಹೋವನನ್ನು ನಿರೀಕ್ಷಿಸುವವನಾಗಿ ಆತನ ಮಾರ್ಗವನ್ನೇ ಅನುಸರಿಸು
(ಕೀರ್ತ. 37:34).

# ದೇವರೊಂದಿಗೆ ನಡೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**ವಯಸ್ಕರ ಸ್ವರ**

**3) ದೇವರೊಂದಿಗೆ ನಡೆಯಬೇಕಾದರೆ ದೇವರೊಂದಿಗೆ ಸಮಯವನ್ನು ಕಳೆಯುವವನಾಗಿರಬೇಕು: "ನಾವು ನಮ್ಮ ದೇವರಾದ ಯೆಹೋವನಿಗೆ ಮೊರೆಯಿಡುವಾಗೆಲ್ಲಾ ಆತನು ಸಮೀಪವಾಗಿಯೇ ಇದ್ದಾನಲ್ಲಾ; ಬೇರೆ ಎಷ್ಟು ದೊಡ್ಡ ಜನಾಂಗಕ್ಕಾದರೂ ಯಾವ ದೇವರು ಹೀಗೆ ಸಮೀಪವಾಗಿರುವನು"** (ಧರ್ಮೋ. 4:7). ದೇವರು ದೇವ ಮನುಷ್ಯನಾದ ಮೋಶೆಯ ಸಂಗಡ ಮುಖಾಮುಖಿಯಾಗಿ ಒಬ್ಬನು ಸ್ನೇಹಿತನ ಜೊತೆ ಹೇಗೆ ಮಾತನಾಡುತ್ತಾನೋ ಹಾಗೆಯೇ ದೇವರು ಮೋಶೆಯ ಸಂಗಡ ಮಾತನಾಡುತ್ತಿದ್ದನು (ವಿಮೋ. 33:11). ಮೋಶೆಯು ದೇವರೊಂದಿಗೆ ಸಮಯವನ್ನು ಕಳೆಯಲು ತನ್ನನ್ನು ಸಿದ್ಧಪಡಿಸಿಕೊಂಡು ಅನ್ನ ನೀರಿಲ್ಲದೆ ಸೀನಾಯ್ ಬೆಟ್ಟಕ್ಕೆ ಹೋಗುತ್ತಿದ್ದನು. ಅವನು ದೇವರ ಸಂಗಡ ಸಂಭಾಷಿಸಿದ್ದರಿಂದ (ಪ್ರಾರ್ಥನೆ ಮಾಡಿದ್ದರಿಂದ) ಆತನ ಮುಖ ಪ್ರಕಾಶಮಾನವಾಗಿತ್ತು (ವಿಮೋ. 34:29). ಪ್ರಿಯ ದೇವ ಮಗುವೇ ನಿನ್ನ ಪ್ರಾರ್ಥನಾ ಜೀವಿತದ ಕುರಿತಾಗಿ ಯೋಚಿಸು. ನೀನು ದೇವರೊಂದಿಗೆ ನಡೆಯಬೇಕಾದರೆ ಗಂಟೆ ಗಟ್ಟಲೆ ಆತನ ಸನ್ನಿಧಿಯಲ್ಲಿ ಸಮಯ ಕಳೆಯುವುದು ಅವಶ್ಯ.

ಇಂದು ಅನೇಕರು ಕ್ರೈಸ್ತರೆಂದು ಹೇಳಿಕೊಂಡು ಮೊಬೈಲ್‌ನಲ್ಲಿ, ಟಿ.ವಿ ಮುಂದೆ, ಲೋಕದ ಸ್ನೇಹಿತರೊಡನೆ ಸಮಯ ಕಳೆಯುವುದರಲ್ಲಿ ದೇವರೊಂದಿಗೆ ಸಮಯ ಕಳೆಯಲು ಸಾಧ್ಯವಾಗುತ್ತ ಇಲ್ಲ. ಅನೇಕ ವಿಶ್ವಾಸಿಗಳಲ್ಲಿ ಈ ದಿನ ಎಷ್ಟು ಸಮಯ ಪ್ರಾರ್ಥಿಸಿದೆ ಎಂದು ಕೇಳಿದರೆ ಅವರ ಉತ್ತರ ಕಾಲು ಗಂಟೆ, ಅರ್ಧ ಗಂಟೆ. ಪ್ರಿಯರೇ ಈ ಅಲ್ಪ ಸಮಯದ ಪ್ರಾರ್ಥನೆಯೊಂದಿಗೆ ನೀನು ಬರುವ ಶೋಧನೆಯನ್ನು ಜಯಿಸಲು ಸಾಧ್ಯವಿಲ್ಲ ಹಾಗೂ ಕ್ರಿಸ್ತನೊಂದಿಗೆ ನಡೆಯಲೂ ಸಾಧ್ಯವಿಲ್ಲ. ನಾವು ಅಮೂಲ್ಯವಾದ ದೇವರ ಸಾನಿಧ್ಯ ಹೊಂದಬೇಕಾದರೆ ಆತನೊಂದಿಗೆ ಸಮಯವನ್ನು ಕಳೆಯಲು ಸಿದ್ಧವಾಗಬೇಕು (ಬೆಲೆ ಕಟ್ಟಲು ಸಿದ್ಧನಾಗಿರು). **"ಆತನನ್ನೇ ದೃಷ್ಟಿಸಿದವರು ಪ್ರಕಾಶವನ್ನು ಹೊಂದಿದರು ಅವರ ಮುಖವು ಲಜ್ಜೆಯಿಂದ ಕೇಡುವುದೇ ಇಲ್ಲ".** ಒಬ್ಬ ಯೌವನಸ್ಥನು ವಿಶ್ವಾಸಿಯಾಗಿ ಕೆಲಸದ ಅನ್ವೇಷಣೆಯಲ್ಲಿದ್ದರಂತೆ ಆತನು ಅನೇಕ ಕಡೆ ಕೆಲಸಕ್ಕಾಗಿ ಪ್ರಯತ್ನ ಮಾಡಿದರೂ ಅವನಿಗೆ ಬಹಳ ಸಮಯದಿಂದ ಉದ್ಯೋಗ ಸಿಗದೆ ಹೋಯಿತು. ಆದರೆ ನಂಬಿಕೆವುಳ್ಳವನಾಗಿ ಪ್ರಯತ್ನ ಮುಂದುವರಿಸಿದನು. ಕಡೆಗೆ ಒಂದು ಆಫೀಸನಲ್ಲಿ ಕೆಲಸಕ್ಕೆಂದು ಇಂಟರ್‌ವ್ಯೂಹ್ (ಸಂದರ್ಶನ) ಪತ್ರ ಬಂತು. ಆತನು ಸಂತೋಷಪಟ್ಟು ನಿಗದಿಯಾದ ದಿನದಲ್ಲಿ ಎಲ್ಲಾ ಸಿದ್ಧತೆಯೊಂದಿಗೆ ಹೊರಡಲು ಸಿದ್ಧನಾದಾಗ, ದೇವರಾತ್ಮನು ಅವನೊಳಗೆ ಮಾತನಾಡಿ 'ನೀನು ಈ ದಿನ ಸಂದರ್ಶನಕ್ಕಾಗಿ ಹೋಗಬೇಡ ಅದರ ಬದಲಾಗಿ ದೇವ ಸನ್ನಿಧಿಯಲ್ಲಿ ಕುಳಿತು ಪ್ರಾರ್ಥಿಸು' ಎಂದಾಗ ಅವನು ಮನಸ್ಸಿನೊಳಗೆ ಯೋಚಿಸಿ ಬಹಳ ಪ್ರಯತ್ನದ ನಂತರ ಈ ಕೆಲಸದ ಕರೆ ಬಂದಿದೆ ಆದರೆ ದೇವರು ಈಗ ಹೋಗಬೇಡಾ ಎಂದು ಹೇಳುತ್ತಾನಲ್ಲ? ಏನೋ ದೇವರ ದೊಡ್ಡ ಉದ್ದೇಶವಿರಬಹುದೆಂದು ಆತ್ಮನಿಗೆ ವಿಧೇಯನಾಗಿ ಕರ್ತನ ಸನ್ನಿಧಿಯಲ್ಲಿ ಮೊಣಕಾಲೂರಿ ತುಂಬಾ ಹೊತ್ತು ಕರ್ತನೊಂದಿಗೆ ಸಮಯ ಕಳೆದನು. ಬಹಳ ಹೊತ್ತಿನ ನಂತರ ಪ್ರಾರ್ಥನೆ ಮುಗಿಸಿ ಹೊರಕ್ಕೆ ಬಂದಾಗ ಅವನ ಮನೆಗೆ ಒಬ್ಬ ಅಧಿಕಾರಿಯು ಈ ಯೌವನಸ್ಥನು ಹುಡುಕಿ ಬಂದು ಹೇಳಿದನು ಈ ದಿನ ನಮ್ಮಲ್ಲಿ ಒಂದು ಉದ್ಯೋಗಕ್ಕಾಗಿ, ಸಂದರ್ಶನಕ್ಕಾಗಿ ಕರೆಯಲ್ಪಟ್ಟ ಅರ್ಜಿಗಳನ್ನು ಗಮನಿಸಿ ಪರಿಶೀಲಿಸುವಾಗ ಈ ಕೆಲಸಕ್ಕೆ ಸೂಕ್ತ ವ್ಯಕ್ತಿ ಸಿಗದೆ ನೀವು ಬರೆದಿರುವ ಅರ್ಜಿಯನ್ನು ನೋಡಿ ನೀವೆ ಸೂಕ್ತ ವ್ಯಕ್ತಿ ಎಂದು ಮನಗಂಡು ಅದರಲ್ಲಿ ಬರೆದಿರುವ ವಿಳಾಸವನ್ನು ಕಂಡು ನಿಮ್ಮಲ್ಲಿ ಬಂದಿದ್ದೇನೆ. ನಾಳೆಯಿಂದಲೇ ಉದ್ಯೋಗಕ್ಕೆ ಹಾಜಾರಾಗಬಹುದೆಂದು ಅಧಿಕಾರಿ ತಿಳಿಸಿದ್ದಾಗ ಯೌವನಸ್ಥ ಸಂತೋಷದಿಂದ ದೇವರನ್ನು ಸ್ತುತಿಸಿದನು. ಹಲ್ಲೆಲೂಯ **"ಆತನಿಗೆ ಮೊರೆಯಿಡುವವರು ಯಥಾರ್ಥವಾಗಿ ಮೊರೆಯಿಡುವವರಾದರೆ ಆತನು ಹತ್ತಿರವಾಗಿದ್ದಾನೆ" (ಕೀರ್ತ. 145:18). ದಾವೀದನು ಬರೆಯುತ್ತಾನೆ, "ನಿನ್ನ ಆಲಯದ ಅಂಗಳಗಳಲ್ಲಿ ಕಳೆದ ದಿನವು ಬೇರೆ ಸಹಸ್ರ ದಿನಗಳಿಗಿಂತ ಉತ್ತಮವಾಗಿದೆ"** (ಕೀರ್ತ. 84:10). ಅರಸನಾದ ದಾವೀದನು ತನ್ನ ಅಂತ್ಯಕಾಲದಲ್ಲಿ ತನ್ನ ಮಗನಾದ ಸಲೋಮೋನನಿಗೆ ಹೇಳಿದ ಮಾತುಗಳು **"ನೀನು (ಆತನನ್ನು) ದೇವರನ್ನು ಹುಡುಕುವುದಾದರೆ ಆತನು ನಿನಗೆ ಸಿಕ್ಕುವನು ಆತನನ್ನು ಬಿಟ್ಟರೆ ನಿನ್ನನ್ನು ಶಾಶ್ವತವಾಗಿ ತಳ್ಳಿಬಿಡುವನು ನೋಡಿಕೋ"**(1 ಪೂರ್ವ. 28:9). ಪ್ರಿಯ ದೇವ ಮಗುವೇ ನೀನು ಕ್ರಿಸ್ತನೊಡನೆ ನಡೆಯಲು ತೀರ್ಮಾನ ಮಾಡುವೆಯಾ? ಇಂದು ಅನೇಕ ಕ್ರೈಸ್ತರು ಯೇಸುವಿನೊಡನೆ ಒಡನಾಟ ಎಷ್ಟೆಂದರೆ ಬರೀ ಒಂದು ಭಾನುವಾರದಿಂದ ಇನ್ನೊಂದು ಭಾನುವಾರದಷ್ಟೇ. ಉಳಿದೆಲ್ಲಾ ಸಮಯದಲ್ಲಿ ಲೋಕದಲ್ಲಿರುವ ಮಾಯೆಯ ಜೀವಿತಕಷ್ಟೇ ಸಿಮೀತವಾಗಿರುತ್ತದೆ. ಭಾನುವಾರ ಕ್ರೈಸ್ತರು ಕ್ರಿಸ್ತನೊಡನೆ ನಡೆಯಲು ಸಾಧ್ಯವಿಲ್ಲ. ಪೌಲನು ಬರೆಯುತ್ತಾನೆ, **"ಕ್ರಿಸ್ತನ ಜೊತೆಯಲ್ಲಿರಬೇಕೆಂಬದೇ ನನ್ನ ಅಭಿಲಾಷೆ ಅದು ಉತ್ತಮೋತ್ತಮ"** (ಫಿಲಿ. 1:23). ಯೇಸುವಿನ ಪ್ರಾರ್ಥನೆ ತಂದೆಯಾದ ದೇವರ ಬಳಿ ಪವಿತ್ರನಾದ ತಂದೆಯೇ ನಾನು ಒಂದಾಗಿರುವ ಹಾಗೇ ಇವರು ಒಂದಾಗಿರಬೇಕೆಂದು ನೀನು ನನಗೆ ಕೊಟ್ಟ ನಿನ್ನ ಹೆಸರಿನಲ್ಲಿ ಇವರನ್ನು ಕಾಯುತ್ತಾ ಬಂದೆನು (ಯೋಹಾ. 17:11)

ದೇವರು ನಿಮ್ಮನ್ನು ಆಶೀರ್ವದಿಸಲಿ.

ಮುಂದುವರಿಯುವದು.......

**ಪಾ॥ ರೊನಾಲ್ಡ್ ಮಚಾದೋ.**

ಆತನು ನಿನ್ನನ್ನು ಮುಂದಕ್ಕೆ ತಂದು ದೇಶವನ್ನು ಅನುಭವಿಸುವಂತೆ ಮಾಡುವನು (ಕೀರ್ತ. 37:34).

# ನೀರಿನ ದೀಕ್ಷಾಸ್ನಾನ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

ಎಲ್ಲಾ ದೇಶದ ಜನರನ್ನು ಶಿಷ್ಯರನ್ನಾಗಿ ಮಾಡಿರಿ ಅವರಿಗೆ ತಂದೆಯ, ಮಗನ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಸ್ನಾನ ಮಾಡಿಸಿ (ಮತ್ತಾ. 28:19–20).

ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು, ರಕ್ಷಣೆ ಹೊಂದುವನು (ಮಾರ್ಕ. 16:16).

ಒಬ್ಬನು ನೀರಿನಿಂದಲೂ, ಆತ್ಮನಿಂದಲೂ ಹುಟ್ಟದೇ ಹೋದರೆ, ಅವನು ದೇವರ ರಾಜ್ಯಕ್ಕೆ ಸೇರಲಾರನು (ಯೋಹಾ. 3:5).

ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು, ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಸ್ನಾನ ಮಾಡಿಸಿಕೊಳ್ಳಿರಿ (ಅ.ಕೃ. 2:38).

ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು, ನಿನ್ನ ಪಾಪಗಳನ್ನು ತೊಳೆದುಕೋ (ಅ.ಕೃ. 22:16).

ಕ್ರಿಸ್ತ ಯೇಸುವಿನಲ್ಲಿ ಸೇರುವುದಕ್ಕೆ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ, ಆತನ ಮರಣದಲ್ಲಿ ಪಾಲುಗಾರರಾಗಿ, ಆತನೊಂದಿಗೆ ಹೂಣಲ್ಪಟ್ಟೆವು (ರೋಮ. 6:3–4).

ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿ ಕೊಂಡಿರುವ ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ (ಗಲಾ. 3:27).

ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ನಿಮ್ಮ ನಿಮ್ಮ ಹೆಂಡತಿಯನ್ನು ಪ್ರೀತಿಸಿರಿ. ಅದನ್ನು ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ, ಜಲಸ್ನಾನವನ್ನು ಮಾಡಿಸಿ ಶುದ್ಧ ಮಾಡಿದನು. (ಎಫೆ. 5:26).

ಆತನ ಕರುಣೆಯಲ್ಲಿಯೇ, ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ, ಪವಿತ್ರಾತ್ಮನು ನಮ್ಮಲ್ಲಿ ನೂತನ ಸ್ವಭಾವವನ್ನು ಉಂಟುಮಾಡುವುದರ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು (ತೀತ. 3:5).

ಆದಕಾರಣ ನೀನು ಅಪರಾಧಿಯೆಂದು ನಮ್ಮ ಮನಸ್ಸು ನಮಗೆ ಸಾಕ್ಷಿ ಹೇಳಿದಂತೆ ನಾವು ಹೃದಯವನ್ನು ಪ್ರೋಕ್ಷಿಸಿಕೊಂಡು, ದೇಹವನ್ನು ತಿಳಿನೀರಿನಿಂದ ತೊಳೆದುಕೊಂಡು ದೇವರ ಬಳಿಗೆ ಬರೋಣ (ಇಬ್ರಿ. 10:22).

ಈ ನೀರು (ಯೋಹಾನ ಕಾಲದಲ್ಲಿ ಪ್ರವಾಹ ನೀರು) ಇದಕ್ಕೆ ಅನುರೂಪವಾಗಿ ದೀಕ್ಷಾಸ್ನಾನವು ಯೇಸುಕ್ರಿಸ್ತನ ಪುನರುತ್ಥಾನದ ಮೂಲಕ ನಮ್ಮನ್ನು ರಕ್ಷಿಸುತ್ತದೆ (1 ಪೇತ್ರ. 3:20–21).

ನಿರೀನ ದೀಕ್ಷಾಸ್ನಾನ ವೆಂದರೇನು? ಮತ್ತಾ. 28:19ರಲ್ಲಿ, ನಮ್ಮ ಪ್ರಭುವಾದ ಯೇಸುಕ್ರಿಸ್ತನ ಆಜ್ಞಾಪಿಸಿದ ಮೇರೆಗೆ ತಂದೆ, ಮಗ ಮತ್ತು ಪವಿತ್ರಾತ್ಮ ಹೆಸರಿನಲ್ಲಿ ಒಬ್ಬನ ತಲೆಯ ಮೇಲೆ ನೀರು ಚಿಮುಕಿಸುವ ಅಥವಾ ಸುರಿಯುವ ಅಥವಾ ನೀರಿನಲ್ಲಿ ಮುಳುಗಿಸುವ ಕ್ರಿಯೆಯೂ ದೀಕ್ಷಾಸ್ನಾನವಾಗಿದೆ.

ಹಳೆ ಒಡಂಬಡಿಕೆಯ ಕಾಲದಲ್ಲಿ ಯಹೂದ್ಯರು ದೀಕ್ಷಾಸ್ನಾನವನ್ನು ಹೋಲುವ ಒಂದು ಸಂಸ್ಕಾರವನ್ನು ಮಾಡುತ್ತಿದ್ದರು. ಅದು ಗಂಡು ಮಗುವಿನ ಎಂಟನೇ ದಿನದಲ್ಲಿ ಆತನ ಶಿಶ್ನದ ಮುಂದೊಗಲನ್ನು ಕತ್ತರಿಸುವ ಕಾರ್ಯವಾಗಿತ್ತು ಆದಿ. 17:10–14. ಕ್ರಿಸ್ತನಲ್ಲಿ ನಂಬಿಕೆಯಿಟ್ಟಂತಹ ವಿಶ್ವಾಸಿಗಳು, ಈಗ ದೈಹಿಕವಾಗಿ ಸುನ್ನತಿ ಮಾಡಿಸಿಕೊಳ್ಳುವ ಅಗತ್ಯವಿಲ್ಲವೆಂದು ಪೌಲನು ಹೇಳುತ್ತಾನೆ. (ಅ.ಕೃ. 15:1–29, ಗಲಾ. 5:2).

ಕೊಲ. 2:11–12ರಲ್ಲಿರುವಂತೆ, ಸುನ್ನತಿಗೆ ಬದಲಾಗಿ ನೀರಿನಿಂದ ದೀಕ್ಷಾಸ್ನಾನದ ಏರ್ಪಾಡಾಯಿತು ಮತ್ತು ಕ್ರಿಸ್ತನು ತಾನೇ ನಮಗೆ ಆತ್ಮೀಯ ಸುನ್ನತಿ ಮಾಡಿ, ಹಳೇ ಪಾಪದ ಸ್ವಭಾವವನ್ನು ತೆಗೆದು ಹಾಕುತ್ತಾನೆ ಮತ್ತು ಬಿಸಾಡುತ್ತಾನೆ ಎಂದು ಭಾಗಶ: ಎಲ್ಲಾ ಸತ್ಯವೇದ ಪಂಡಿತರು ನಂಬುತ್ತಾರೆ. ಸ್ನಾನಿಕನಾದ ಯೋಹಾನನು ಪಶ್ಚಾತ್ತಾಪದ ಪಾಪಗಳ ಪರಿಹಾರಕ್ಕಾಗಿ ದೀಕ್ಷಾಸ್ನಾನವನ್ನು ಕಾರ್ಯಗತಗೊಳಿಸಿದನು (ಮಾರ್ಕ. 1:4). ಆದರೆ ಇದು ಕ್ರೈಸ್ತ ದೀಕ್ಷಾಸ್ನಾನವಾಗಿರಲಿಲ್ಲ. ಕ್ರಿಸ್ತನ ಮರಣ ಮತ್ತು ಪುನರುತ್ಥಾನದ ನಂತರ ಯೋಹಾನನ ದೀಕ್ಷಾಸ್ನಾನವು ಕ್ರೈಸ್ತರಿಗೆ ಸಾಕಾಗಬಹುದೆಂದು ಎಣಿಸಲಾಗಲಿಲ್ಲ (ಅ.ಕೃ. 18:25). ಮತ್ತು ಎಫೆಸದವರು ಈ ಮೊದಲು ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದರೂ ಸಹ ಮತ್ತೊಮ್ಮೆ ಪ್ರಭುವಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು ಅ.ಕೃ. 19:1–7. ಆದಾಗ್ಯೂ ಒಂದೇ ಒಂದು ಕ್ರೈಸ್ತ ದೀಕ್ಷಾಸ್ನಾನವಿದೆ (ಎಫೆ. 4:1).

ಯೇಸುವು ತಾನೇ ಯೋರ್ದಾನ್ ಹೊಳೆಯಲ್ಲಿ ಸ್ನಾನಿಕನಾದ ಯೋಹಾನನಿಂದ ಸ್ನಾನದೀಕ್ಷೆ ಹೊಂದಿದನು (ಮತ್ತಾ. 3:13–17). ಯಾವುದೇ ಪಾಪ ಮಾಡದಿದ್ದರೂ, ಅದಕ್ಕಾಗಿ ಯಾವ ಪಶ್ಚಾತ್ತಾಪ ಅಗತ್ಯ ಇಲ್ಲದಿದ್ದರೂ, ಎಲ್ಲಾ ನೀತಿಯನ್ನು ನೇರವೇರಿಸುವುದಕ್ಕಾಗಿ ಯೇಸುವು ದೀಕ್ಷಾಸ್ನಾನವನ್ನು ತೆಗೆದುಕೊಂಡನು, ಮತ್ತಾ. 3:15. ಆತನ ನೀರಿನಿಂದ ದೀಕ್ಷಾಸ್ನಾನ ನಂತರ ಆತನ ಮೇಲೆ ಪವಿತ್ರಾತ್ಮನು ಇಳಿದು ಬಂದನು. ಅದರಿಂದ ಆತನ ಸೇವೆಯು ಮತ್ತು ಪೌರೋಹಿತಕ್ಕೆ ಸಾಧಕವಾಯಿತು (ಮಾರ್ಕ. 1:10).

ನೀತಿವಂತರ ರಕ್ಷಣೆ ಯೆಹೋವನಿಂದಲೇ; ಇಕ್ಕಟ್ಟಿನಲ್ಲಿ ಆತನೇ ಅವರಿಗೆ ದುರ್ಗಸ್ಥಾನ (ಕೀರ್ತ. 37:39).

ಯೇಸುವು ತನ್ನ ಶಿಲುಬೆಯ ಮರಣವನ್ನು ಒಂದು ಸ್ನಾನದೀಕ್ಷೆಯೆಂದೇ ವರ್ಣಿಸುತ್ತಾನೆ (ಲೂಕ. 12:50). ಯೇಸುವಿನ ಮರಣ ಮತ್ತು ಪುನರುತ್ಥಾನದ ದೀಕ್ಷಾಸ್ನಾನವೇ, ನಮ್ಮ ದೀಕ್ಷಾಸ್ನಾನಕ್ಕೆ ತಳಹದಿಯಾಗಿದ್ದು, ಆ ಕಾರಣದಿಂದಲೇ ನಾವು ದೀಕ್ಷಾಸ್ನಾನಕ್ಕೆ ಅರ್ಹರಾಗಿದ್ದೇವೆ (ರೋಮ. 6:3–4, ಕೊಲೊ. 2:12, 1 ಪೇತ್ರ. 3:21).

ಪ್ರಾರಂಭದಿಂದಲೂ ಸಭೆಯು ಯೇಸುವಿನ ಆಜ್ಞೆಯನ್ನು ಪಾಲಿಸುತ್ತಿತ್ತು ಮತ್ತು ಹೊಸ ವಿಶ್ವಾಸಿಗಳಿಗೆ ದೀಕ್ಷಾಸ್ನಾನ ಕೊಟ್ಟಿತ್ತು. ಕ್ರೈಸ್ತ ದೀಕ್ಷಾಸ್ನಾನದ ವಿಷಯದಲ್ಲಿ ಗಮನಿಸತಕ್ಕ ಉದಾಹರಣೆಗಳು ನಮಗೆ ಹೊಸ ಒಡಂಬಡಿಕೆಯ, (ಅ.ಕೃ. 2:41, 8:21). ಯೇಸುಕ್ರಿಸ್ತನಲ್ಲಿ ನಂಬಿಕೆಯನ್ನು ವ್ಯಕ್ತಪಡಿಸಿದ ಕೂಡಲೇ, ನೀರಿನಿಂದ ದೀಕ್ಷಾಸ್ನಾನವಾದದ್ದನ್ನು ಈ ಅನೇಕ ವಚನಗಳಲ್ಲಿ ನಾವು ನೋಡಬಹುದು. ಅನೇಕರು ತಮ್ಮ ಮನೆಯವರೆಲ್ಲರ ಸಹಿತವಾಗಿ ದೀಕ್ಷಾಸ್ನಾನ ಹೊಂದಿದರು (ಅ.ಕೃ. 10:48, 16:31–33).

ನೀರಿನ ದೀಕ್ಷಾಸ್ನಾನವು ಕ್ರೈಸ್ತರಿಗೆ ಮಾತ್ರ ಅನ್ವಯಿಸುತ್ತಿರಲಿಲ್ಲ. ಕ್ರಿಸ್ತನು ಬರುವುದಕ್ಕಿಂತ ಮೊದಲೇ ಯಹೂದ್ಯರಲ್ಲದವರು, ಯೆಹೂದ್ಯರಾಗಿ ಮತಾಂತರಗೊಂಡಾಗ ಅವರು ನೀರಿನಿಂದ ದೀಕ್ಷಾಸ್ನಾನ ಹೊಂದುತ್ತಿದ್ದರು ಮತ್ತು ಕ್ರಿಸ್ತನ ಕಾಲದಲ್ಲಿ ಕೆಲವು ಗ್ರೀಕ್ ಮತಾವಲಂಬಿಗಳು ಧಾರ್ಮಿಕ ಕ್ರಿಯೆಯಂತೆ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕಾಗಿತ್ತು. ಕೆಲವು ಸಾರಿ ನೀರಿಗೆ ಬದಲಾಗಿ ತಲೆ ಮೇಲೆ ರಕ್ತವನ್ನು ಸುರಿಸುವುದರ ಮೂಲಕವೂ ಇದನ್ನು ಮಾಡಲಾಗುತ್ತಿತ್ತು.

ಮುಂದುವರಿಯುವದು....

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

---

**ಆರೋಗ್ಯ ಸ್ವರ**

# ಮಕ್ಕಳೂ ಒತ್ತಡಕ್ಕೊಳಗಾಗುತ್ತಾರೆ

ಹೌದು–ಮಾನಸಿಕ, ತುಮುಲ, ಒತ್ತಡ, ಸಂಘರ್ಷಗಳು ಹಿರಿಯರಿಗೆ ಮಾತ್ರವಲ್ಲ ಮಕ್ಕಳೂ ಇವುಗಳಿಂದ ಬಳಲುತ್ತಾರೆ. ಮಗುವು ಹೊರಗಿನ ಪರಿಸರದಲ್ಲಿ ಸಂವಹನ ಮಾಡಬೇಕಾದ ಸಂದರ್ಭ ಬಂದಾಗ, ಹೊಸ ವ್ಯಕ್ತಿ ವಾತಾವರಣಗಳಲ್ಲಿ ಬೆರೆಯಬೇಕಾದ ಪರಿಸ್ಥಿತಿಯಲ್ಲಿ, ತನಗೆ ಹಿತಕರವಲ್ಲದ ಸನ್ನಿವೇಶಗಳಲ್ಲಿ ಮಗುವು ಒತ್ತಡಕ್ಕೆ ಒಳಗಾಗುತ್ತದೆ. ಮನೆ–ಮನೆಯೇ ಮಗುವು ಮೊತ್ತಮೊದಲು ತನ್ನನ್ನು ಒಡ್ಡಿಕೊಳ್ಳುವ ಸಾಮಾಜಿಕ ಪರಿಸರ, ಮಗುವಿನ ಮಾನಸಿಕ ಒತ್ತಡದ ಮಟ್ಟ ಹೆಚ್ಚು ಕಡಿಮೆಯಾಗುತ್ತದೆ. ಮಗುವು ಮನೆಯ ವಾತಾವರಣದಲ್ಲಿ ಸುಖ, ಶಾಂತಿ, ಭದ್ರತೆಯ ಭಾವನೆಯಿಂದ ಇದ್ದಷ್ಟು ಅನುಭವಿಸುತ್ತದೆ. ಬದಲಾಗಿ ತಾಯಿತಂದೆಯರು ಹೆಚ್ಚಿನ ಒತ್ತಡ, ಆತಂಕವನ್ನು ಅನುಭವಿಸುತ್ತಿದ್ದರೆ, ಮನೆಯ ವಾತಾವರಣ ಒತ್ತಡ, ತುಮುಲಗಲ ಗೂಡಾಗಿದ್ದರೆ ಮಗುವು ಹೆಚ್ಚಿನ ಒತ್ತಡವನ್ನು ಅಯಾಚಿತವಾಗಿ ಅನುಭವಿಸುತ್ತದೆ.

ಮಗುವು ಒತ್ತಡವನ್ನು ಅನುಭವಿಸುತ್ತಿದೆ ಎಂದು ನಿಮಗೆ ಅರಿವಾದ ಕೂಡಲೇ ಸಂಬಂಧಪಟ್ಟ ತಜ್ಞವೈದ್ಯರೊಂದಿಗೆ ಸಮಲೋಚಿಸಲು ಹಿಂಜರಿಯದಿರಿ. ಯಾಕೆಂದರೆ ಮಕ್ಕಳ ಮಾನಸಿಕ ತುಮುಲಗಲನ್ನು ತಜ್ಞರು ಆಪ್ತ ಸಲಹೆ, ಔಷಧ ಹಾಗೂ ನಡೆವಳಿಕೆಯ ಚಿಕಿತ್ಸೆ ಅಥವಾ ಇನ್ನಿತರ ವಿಧಾನಗಳಿಂದ ಸುಲಭವಾಗಿ ಪರಿಹರಿಸಬಲ್ಲರು. ಮಗುವು ಗಂಭೀರ ಲಕ್ಷಣಗಳನ್ನು ಪ್ರಕಟಿಸುವವರೆಗೆ ಕಾಯಬೇಡಿ. ಸಮಸ್ಯೆ ಚಿಕ್ಕದಾಗಿದ್ದಾಗ ನಿರ್ಲಕ್ಷಿಸದಿದ್ದರೆ ಪರಿಹಾರ ಸರಳ ಮತ್ತು ಸುಲಭ. ಒತ್ತಡದ ಲಕ್ಷಣಗಳನ್ನು ಮಕ್ಕಳು ಬೇರೆ ಬೇರೆ ರೀತಿಯಲ್ಲಿ ಪ್ರಕಟಪಡಿಸುತ್ತವೆ. ಉದಾ: ಹಾಸಿಗೆಯಲ್ಲಿ ಮೂತ್ರ ವಿಸರ್ಜಿಸುವುದು, ಆಗಾಗ್ಗೆ ಅತ್ತು ರಂಪ ಮಾಡುವುದು, ಗಮನವಿಟ್ಟು ಓದುವ ಪ್ರಯತ್ನವನ್ನೇ ಮಾಡದಿರುವುದು, ಒಂಟಿಯಾಗಿ ಸಮಯ ಕಳೆಯಲು ಇಚ್ಛಿಸುವುದು, ಸಾಮಾಜಿಕ ನಡವಳಿಕೆಗಳನ್ನು ಕುಂಠಿತಗೊಳಿಸುವುದು, ದೈಹಿಕ ಸಮಸ್ಯೆಗಳಾದ ತಲೆನೋವು, ಹೊಟ್ಟೆನೋವುಗಳಿಂದ ಆಗಾಗ್ಗೆ ತೊಂದರೆಗೆ ಒಳಗಾಗುವುದು.

ಹೌದು, ಮಗುವು ತಾನು ಒತ್ತಡವನ್ನು ಅನುಭವಿಸುತ್ತಿದ್ದೇನೆ ಎಂದು ಅರಿಯಲಾರದು, ಅಂತೆಯೇ ತಿಳಿಸಲೂ ಅರಿಯಲಾರದು. ಆದ್ದರಿಂದ ಹೊಟ್ಟೆನೋವು, ತಲೆನೋವು ಎಂದು ಆಗಾಗ್ಗೆ ಮಗು ಸಂಕಟಪಡುತ್ತಿದ್ದರೆ ನಿರ್ಲಕ್ಷಿಸದಿರಿ ತಾಯಿಯಾಗಿ ನೀವು ಅದರ ಕಾರಣಗಳನ್ನು ಹೆಚ್ಚು ನಿಗಾವಹಿಸಿ ಕಂಡು ಹೌದಾದರೆ ತಕ್ಷಣ ನಿಭಾಯಿಸಲು ಮುಂದಾಗಿ, ನೀವು ಮಗುವಿನೊಂದಿಗೆ ನಕ್ಕುನಲಿಯುತ್ತಿದ್ದರೆ ಇಂತಹ ಮನೋದೈಹಿಕ ಒತ್ತಡದ ಸಮಸ್ಯೆಗಳು ಕಡಿಮೆಯಾಗುತ್ತವೆ. ಹಾಗೂ ನಿವಾರಿಸಲ್ಪಡುತ್ತವೆ. ಮನೆಯೊಳಗಿನ ಸಂಘರ್ಷಮಯ ವಾತಾವರಣ, ತಾಯಿ ತಂದೆಯರ ಬೈಗುಳ, ಹೊಡೆದಾಟ, ಆಸ್ತಿ ವಿವಾದ, ಕೌಟುಂಬಿಕ ಸಮಸ್ಯೆಗಳು, ಅನಾರೋಗ್ಯ ಇತ್ಯಾದಿಗಳು ಮಗುವಿನಲ್ಲಿ ಒತ್ತಡಕಾರಕ ಹೇತುಗಳಾಗಿವೆ. ಮನೆಯ ಯಾವುದೇ ಒತ್ತಡಕಾರಕ ವಾತಾವರಣ ಮಗುವಿನಲ್ಲಿ ಖಂಡಿತವಾಗಿಯೂ ತುಮುಲ ಉಂಟು ಮಾಡುವುದರಿಂದ ಆದಷ್ಟು ಮನೆಯ ವಾತಾವರಣ ತಿಳಿಯಾಗಿ, ಒತ್ತಡ ಮುಕ್ತವಾಗಿರುವಂತೆ ನೋಡಿಕೊಳ್ಳುವುದು ನಿಮ್ಮ ಮೊದಲ ಕರ್ತವ್ಯ.

ಮಗುವು ಒತ್ತಡಕ್ಕೆ ಒಳಗಾಗುತ್ತಿದೆ ಎಂದು ನಿಮಗೆ ಅರಿವಾದರೆ ಅದರೊಂದಿಗೆ ಹೆಚ್ಚು ಮುಕ್ತವಾಗಿ, ನಲಿವಿನಿಂದ, ನಗುತ್ತಾ ವ್ಯವಹರಿಸಿ. ಮಗುವು ಸಂತೋಷದ ವಾತಾವರಣದಲ್ಲಿದ್ದಾಗ ತನ್ನ ಮನಸ್ಸನ್ನು ಹೆಚ್ಚು ಸುಲಭವಾಗಿ ತೆರೆದಿಡಬಲ್ಲದು. ಮಗುವಿನ ನಂಬಿಕೆ ಹಾಗೂ ಪ್ರೀತಿಗೆ ನೀವು ಬದ್ಧರಾಗಿರಬೇಕು ಅಷ್ಟೇ. ಆಗ

ಯೆಹೋವನು ಸಹಾಯಕನಾಗಿ ಅವರನ್ನು ತಪ್ಪಿಸಿಬಿಡುವನು; ಅವರು ಆತನ ಆಶ್ರಿತರಾದ್ದರಿಂದ ದುಷ್ಟರ ಕೈಯಿಂದ ತಪ್ಪಿಸಿ ರಕ್ಷಿಸುವನು (ಕೀರ್ತ. 37:40).

ಮಗುವು ತನ್ನ ಒತ್ತಡವನ್ನು ಹೊರಹಾಕಬಲ್ಲದು ಸುಲಭದಲ್ಲಿ. ಆದರೆ ಮಗುವು ಮಾತನಾಡಲು, ಭಾವನೆಗಳನ್ನು ಹಂಚಿಕೊಳ್ಳಲು ಹಿಂಜರಿಯುತ್ತಿದ್ದರೆ ಹೆಚ್ಚು ಬಲ ಪ್ರಯೋಗ ಮಾಡದಿರಿ. ಮನೆಯಿಂದ ಹೊರಗೆ ಉದ್ಯಾನವನ, ಆಟದ ಮೈದಾನಗಳಲ್ಲಿ ಹರ್ಷ ಚಿತ್ತರಾಗಿ, ಮುಕ್ತವಾಗಿ, ಮಗುವಿನಂತೆಯೇ ನಿಮ್ಮ ಮಗುವಿನೊಂದಿಗೆ ಒಂದಾಗಿ! ಆ ಬಳಿಕ ಮಗುವೇ ತನ್ನ ಶಾಲೆಯ ಮನೆಯ ಅಥವಾ ತನ್ನ ಗೆಳೆಯ ಗೆಳತಿಯರ ಜೊತೆಗಿನ ಅಹಿತಕರ ಸನ್ನಿವೇಶ ಅಥವಾ ಒತ್ತಡದ ಸಂದರ್ಭದ ಚಿತ್ರಣವನ್ನು ತಾನಾಗಿ ನೀಡಬಹುದು. ಪರಿಹಾರ ಸುಲಭ ಸಾಧ್ಯ.

ಮಗುವಿಗೆ ಬಾಲ್ಯಾವಸ್ಥೆಯ ಒತ್ತಡಗಳನ್ನು ಸುಲಭದಲ್ಲೇ ನಿಭಾಯಿಸಬಹುದೂ ಕೂಡ. ಒಂದಿಷ್ಟು ಗಮನ, ಆರೈಕೆ, ಪ್ರೀತಿ, ಪರಸ್ಪರ ಹಂಚಿಕೊಳ್ಳುವಿಕೆ, ಲಾಲನೆ ಪಾಲನೆ ಮಗುವನ್ನು ಒತ್ತಡ ಮುಕ್ತಗೊಳಿಸಬಲ್ಲದು. ಮಗುವಿನ ಮುಗ್ಧಮನ ಬೇಗನೇ ತಿಳಿಯಾಗಬಲ್ಲದು, ಹಕ್ಕಿಯಂತೆ ಮುಕ್ತವಾಗಿ ಹಾರಬಲ್ಲದು. ನಿಮ್ಮ ಮಗುವಿನ ವ್ಯಕ್ತಿತ್ವ ಉನ್ನತಗೊಳಿಸಲು, ಮನತಟ್ಟಲು, ಬದುಕು ಕಟ್ಟಲು ಇದು ನಿಮ್ಮ ಮಹತ್ತರ ಕೊಡುಗೆ ಎನ್ನುವುದರಲ್ಲಿ ಸಂಶಯವಿಲ್ಲವಷ್ಟೇ!

– ಸಂಗ್ರಹ

# ಆವ್ರ್

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಸರ್ವೆಸ್ಪರ್ ದೇವಾನ್ ಸಾಂಗಲ್ಲ್ಯಾ ಪರ್ಮಾಣೆ ಸಾತ್ ದಿಸಾನಿಂ ಭುಂಯರ್ ವಯ್ರ್ ಚಾಳೀಸ್ ದೀಸ್ ಪರ್ಯಾಂತ್ ಶಿರಾಂಧಾರಿಚೊ ಪಾವ್ಸ್ ಒತ್ಲೊ. ಹ್ಯಾ ವಕ್ತಾ ನೊಯೆಕ್ ಸಯ್ಯಿಂ (600) ವರ್ಸಾಂ ಪ್ರಾಯ್ ಭರಲ್ಲಿ, ಅಶೆಂ ಭಿರಾಂಕುಳ್ ಆವ್ರಾ ನಿಮ್ತಿಂ ಮಳ್ಬಾಪಂದಾ ಜಿಯೆಂವ್ಚಿ ಹರ್‍ಯೇಕ್ ಜಿವಿ ನಾಸ್ ಜಾಲಿ. ನೊಯೆ ಆನಿಂ ತಾಚೆಂ ಕುಟಾಮ್ ತಸೆಂಚ್ ತಾರ್ವಾಂತ್ಲಿಂ ಸುಕ್ಣಿಂ, ಮನ್ಜಾತಿ ಆನಿ ಜಿವ್ದಾಳಿಂ ವಾಂಚೊನ್ ಉರ್ಲಿಂ.

ನೊಯೆನ್ ಧಾಡಲ್ಲ್ಯಾ ಪಾರ್ವ್ಯಾಚ್ಯಾ ಬೊಂಚಿಂತ್ ಜಯ್ತುನ್ (ಒಲಿವ್) ಝಡಾಚಿ ಆಂಕ್ರಿ ಪಳೆವ್ನ್ ಆವ್ರ್ ದೆಂವ್ಲೆಂ ಮ್ಹಣ್ ತೊ ಜಾಣಾ ಜಾಲೊ, ಅಶೆಂ ಲಗ್ಭಗ್ ಎಕಾ ವರ್ಸಾ ಉಪ್ರಾಂತ್ ಆವ್ರ್ ದೆಂವ್ತಚ್ ಸರ್ವೆಸ್ಪರ್ ದೇವಾನ್ ನೊಯೆಕ್, ತಾಚ್ಯಾ ಕುಟ್ಮಾಕ್ ತಸೆಂಚ್ ತಾರ್ವಾಂತ್ ಆಸಲ್ಲ್ಯಾ ಸರ್ವ್ ಜೀವಿಂಕ್ ಭಾಯ್ರ್ ಆಪಯ್ಲೆಂ ಆನಿಂ "ಸಂತಾನ್ ವ್ರದ್ದೆಚೆಂ" ಆಶಿರ್ವಾದ್ ದಿಲೆಂ.

ಜನಂಗಾಂ.

ತಾರ್ವಾ ಥಾವ್ನ್ ಭಾಯ್ರ್ ಆಯಿಲ್ಲ್ಯಾ ಉಪ್ರಾಂತ್ ನೊಯೆನ್ ಆಲ್ತಾರ್ ಬಾಂದುನ್ ಆಪ್ಣಾಕ್ ತಸೆಂಚ್ ಆಪ್ಲ್ಯಾ ಕುಟ್ಮಾಕ್ ವಾಂಚೊನ್ ಉರಯಿಲ್ಲ್ಯಾ ಖಾತಿರ್ ಸರ್ವೆಸ್ಪರ್ ದೇವಾಕ್ ಅರ್ಗಾಂ–ಬಲಿ ಭೆಟಯ್ಲಿ. ಸರ್ವೆಸ್ಪರ್ ದೇವಾನ್ ನೊಯೆಲಾಗಿಂ ಎಕ್ ಖರಾರ್ ಕೆಲೆಂ "ಹ್ಯಾ ಉಪ್ರಾಂತ್ ಕೆದಿಂಚ್ ಪರ್ತುನ್ ಆವ್ರಾಚ್ಯಾ ಉದ್ಕಾನ್ ಸಗ್ಳಿ ಭುಂಯ್ ನಾಸ್ ಜಾಂವ್ಚಿ ನಾ. ಭುಂಯ್ಚೆರ್ ಪಾವ್ಸಾಚಿಂ ಮೊಡಾಂ ಭರ್ತಾನಾ ಆನಿಂ ಆಕಾಸಾಚೆರ್ "ಪಾವ್ಸಾ ಧೊಣು (ಕಾಮನ ಬಿಲ್ಲು)" ಉದೆತಾನಾ ಹಾಂವೆಂ ತುಮ್ಚೆಲಾಗಿಂ ಕೆಲ್ಲೊ ಖರಾರ್ ಹಾಂವ್ ಉಗ್ಡಾಸಾಕ್ ಹಾಡ್ತಲೊಂದ ಅಶೆಂ ಮನ್ಶ್ಯಾಕುಳ್ ಪಾವ್ಸಾಧೊಣು ದೆಖ್ತಾನಾ ತುಮ್ಚೆ ಸಂಗಿಂ ಕೆಲ್ಲೆಂ ಖರಾರ್ ಉಗ್ಡಾಸಾಕ್ ಹಾಡ್ತೆಲೆಂ.

ನೊಯೆ ಸಂಸಾರಾಂತ್ ಸಾಡೆನೊವ್ಶಿಂ (650) ವರ್ಸಾಂ ಜಿಯೆಲೊ. ತಶೆಂ ನೊಯೆಚಿ ಸಂತತ್ ಭುಂಯ್ಚೆರ್ ಭರ್ಲಿ. ಹ್ಯಾ ಕಾಳಾರ್ ಸಗ್ಳ್ಯಾ ಭುಂಯ್‌ವಯ್ರ್ ಎಕಚ್ ಭಾಸ್ ಆಸಲ್ಲಿ, ಲೋಕ್ ಸರ್ವ್ ಮೆಳೊನ್ ಆಕಾಸಾಕ್ ತೆಂಕ್ತಾ ತಿತ್ಲೆಂ ವ್ಹಡ್ ಎಕ್ ಭುರುಜ್ ಬಾಂದುಂಕ್ ಭಾಯ್ರ್ ಸರ್ಲೊ, ಹೆಂ ಸರ್ವ್ ಆಡಂವ್ಕ್ ಸರ್ವೆಸ್ಪರ್ ದೇವಾನ್ ತಾಂಚೆ ಮದೆಂ ಭಾಶೆ ಗೊಂದಳ್ ಘಾಲೊ ತವಳ್ ತೆ ಎಕಾಮೆಕಾ ಸಮ್ಜಾನಾ ಜಾಲೆ ಆನಿಂ ಸರ್ವೆಸ್ಪರ್ ದೇವಾನ್ ತಾಂಕಾಂ ಭುಂಯ್ ಭರ್ನ್ ಶಿಂಪ್ಡಾಯ್ಲೆಂ. ಅಶೆಂ ವಿವಿಧ್ ಭಾಸೊ, ಜನಾಂಗಾ ಜಾಂವ್ಕ್ ಪಾವ್ಲಿಂ. ಸರ್ವೆಸ್ಪರ್ ದೇವಾನ್ ತಾಂಕಾಂ ಭಾಯ್ರ್ ಘಾಲ್ಲ್ಯಾ ಶಹರಾಕ್ "ಬಾಬೆಲ್" ಮ್ಹಣ್ ನಾಂವ್ ಪಡ್ಲೆಂ.

ಭಾಸಯ್ಲೊ ಗಾಂವ್. ಅಶೆಂ ಆಸ್ತಾಂ "ಉರ್" ಮ್ಹಳ್ಳ್ಯಾ ಗಾಂವಾಂತ್ ನೊಯೆಚ್ಯಾ ಸಂತತೆಚ್ಯಾ "ತೇರಾ" ಚೊ ಪೂತ್ "ಆಬ್ರಾಮ್" ಹಾಕಾ ಸರ್ವೆಸ್ಪರ್ ದೇವ್ ದಿಷ್ಟಿಕ್ ಪಡೊನ್ "ತುಂ ತುಜೊ ಗಾಂವ್ ಸೊಡ್ನ್ ಹಾಂವೆ ಭಾಸಯಿಲ್ಲ್ಯಾ ಗಾಂವಾಕ್ ಚಲ್.. ತುಜೆಂ ನಾಂವ್ ಹಾಂವ್ ಥಿರ್ ಕರ್ತಲೊಂ ತಸೆಂಚ್ ತುಜೆ ನಾಂವಿಂ ತುಜಿ ಸಂತತ್ ಆಶಿರ್ವಾದ್ ಜೊಡ್ತೆಲಿ" ಮ್ಹಣ್ ಆಶಿರ್ವಾದಿತ್ ಕೆಲೊ ಅಶೆಂ ಆಬ್ರಾಮ್ ಆಪ್ಲ್ಯಾ ಕುಟ್ಮಾ ಪರಿವಾರಾ ಸಮೇತ್ ತಸೆಂಚ್ ಆಪ್ಲ್ಯಾ ಭಾವಾಚ್ಯಾ ಪೂತಾ "ಲೋತಾ" ಸಂಗಿಂ ಗುಡೆ, ದೊಂಗರ್ ನ್ಹಂಯೊ ದಾಂಟುನ್ "ಕಾನಾನ್" ಗಾಂವಾಕ್ ವಾಟ್ ಧರ್ನ್ ಚಮ್ಕೊಂಕ್ ಲಾಗ್ಲೊ. ಪಯ್ಣಾ ವೆಳಿಂ ಶೆಕೆಮಾಂತ್ಲ್ಯಾ ಮೂರೆಂತ್ ತಾಣೆಂ ಆಪ್ಲೊ ತಂಬು ಮಾರ್ಲೊ ಆನಿಂ ತ್ಯಾ ವೆಳಿಂ ಸರ್ವೆಸ್ಪರ್ ದೇವ್ ಆಬ್ರಾಮಾಕ್ ದಿಷ್ಟಿಕ್ ಪಡೊನ್ "ಹೊ ಗಾಂವ್ ತುಜ್ಯಾ ಸಂತತೆಕ್ ದಿತಲೊಂ" ಮ್ಹಣಾಲೊ. ದೆಕುನ್ ಆಬ್ರಾಮಾನ್ ಥಂಯ್ಸರ್ ಸರ್ವೆಸ್ಪರ್ ದೇವಾಕ್ ಆಲ್ತಾರ್ ಉಬಾರ್ನ್ ಆರಾಧನ್ ಕೆಲೆಂ.

ಕಾನಾನ್ ದೇಶಾಂತ್ಲ್ಯಾ ಜಾಯ್ತ್ಯಾ ಜಾಗ್ಯಾನಿಂ ಆಬ್ರಾಮ್ ಭಂವ್ಲೊಂ ಅಶೆಂ ಸರ್ವೆಸ್ಪರ್ ದೇವಾಚ್ಯಾ ಅಶಿರ್ವಾದಾನಿಂ ಆಬ್ರಾಮಾಲಾಗಿಂ ಜಾಯ್ತೆಂ ಭಾಂಗಾರ್, ಧನ್–ದಿರ್ವೆಂ,

ಅವನ ಆತ್ಮವನ್ನು ಅಧೋಲೋಕಕ್ಕೆ ಬೀಳದಂತೆ ತಡೆದು ಅವನ ಜೀವವನ್ನು ದೈವಾಸ್ತ್ರದಿಂದ ಅಳಿದುಹೋಗದ ಹಾಗೆ ನಿಲ್ಲಿಸುವನು (ಯೋಬ. 33:18).

ಆಳಾಂ, ಗೊರ್ವಾಂ–ಬಕ್ರೆ ಜಮೊ ಜಾಲೆ. ತಸೆಂಚ್ಚ್ ತಾಚೆ ಬರಾಬರ್ ಆಯಿಲ್ಲ್ಯಾ ಲೋತಾಕ್‌ಯ್ ಅಸಲಿಚ್ಚ್ ದವ್ಲತ್ ಫಾವೊ ಜಾಲಿ. ಅಸೆಂ ಆಸಲ್ಲ್ಯಾನ್ ತಾಣಿಂ ರಾವಲ್ಲೊ ಗಾಂವ್ ತಾಂಕಾ ಪುರೊ ಪಡ್ಲೊ ನಾ. ತವಳ್ ತವಳ್ ಆಬ್ರಾಮಾಚ್ಯಾ ಆನಿಂ ಲೋತಾಚ್ಯಾ ಗೊವ್ಳ್ಯಾಂ ಮದೆಂ ತಕ್ರಾರ್ ಉಬ್ಜಾತಾಲೆ. ತ್ಯಾ ದೆಕುನ್ ತಾಣಿಂ ತಾಂಚೆಂ ಮದೆಂ ವಾದ್–ವಿವಾದ್ ನಾತಲ್ಲೆಬರಿಂ ವಾಂಟೆ ಕೆಲೆ. ಲೋತಾನ್ ಪಳೆಂವ್ಕ್ ಬೋವ್ ಸುಂದರ್ ದಿಸ್ಚೊ ಜೊರ್ದಾನ್ ನ್ಹಂಯ್ ಬಗ್ಲೆಕ್ ಆಸ್ಚೊ "ಸೊದೊಮ್" ಗಾಂವ್ ವಿಂಚ್ಲೊ. ಪುಣ್ ಥಂಯ್ಚೊ ಲೋಕ್ ಅಣ್ವೆ ಚಾಲಿಚೊ ಆನಿಂ ಸರ್ವೆಸ್ಪರ್ ದೇವಾಚ್ಯಾ ದಿಷ್ಟಿನ್ ಪಾತ್ಕಿ ಜಾವ್ನಾಸಲ್ಲೊ. ಆಬ್ರಾಮ್ ಸರ್ವೆಸ್ಪರ್ ದೇವಾನ್ ಭಾಸಯಿಲ್ಲ್ಯಾ ಕಾನಾನ್ ಗಾಂವಾಂತಚ್ಚ್ ವಸ್ತಿ ಕರ್ನ್ ರಾವ್ಲೊ.

ಅಬ್ರಾಮಾ ಸಂಗಿಂ ಖರಾರ್. ಹೆಬ್ರೊನಾಂತ್ ಸರ್ವೆಸ್ಪರ್ ದೇವ್ ಪರ್ತ್ಯಾನ್ ಆಬ್ರಾಮಾಕ್ ದಿಷ್ಟಿಕ್ ಪಡೊನ್ ಮ್ಹಣಲಾಗ್ಲೊ "ಆಬ್ರಾಮ್ ತುಂ ಭಿಯೆನಾಕ ಹಾಂವ್ ತುಕಾಂ ಸಾಂಬಾಳ್ತಲೊಂ ಆನಿಂ ತುಕಾ ಬೊವ್ ಧನ್ ದಿರ್ವೆಂ ದಿತಲೊಂ."

ಆಬ್ರಾಮಾನ್ ಜಾಪ್ ದೀವ್ನ್ "ಕೆದೆಂ ವರ್ತೆಂಯ್ ದೆಂವೆಂ ದಿಲ್ಯಾರ್‌ಯ್ ಕಿತೆಂ ಫಾಯ್ದೊ ಸರ್ವೆಸ್ಪರಾ? ಮ್ಹಾಕಾ ಎಕ್‌ಯ್ ಭುರ್ಗೆಂ ನಾ.. ಮ್ಹಜೆಂ ಮ್ಹಳ್ಳೆಂ ದುಸ್ರ್ಯಾಕ್ ವೆತೆಲೆಂ" ಮ್ಹಣಾಲೊ.

ತೆದ್ನಾ ಸರ್ವೆಸ್ಪರ್ ದೇವಾನ್ ಆಬ್ರಾಮಾಕ್ ಭಾಯ್ರ್ ಆಪವ್ನ್ ಹಾಡ್ನ್ ಆಕಾಸಾಕ್ ದಾಕವ್ನ್ "ತಾಂಕ್ತಾ ಜಾಲ್ಯಾರ್ ಆಕಾಸಾ ವಯ್ಲಿಂ ತಾರಾಂ ಮೇಜ್. ತಾಂಚೆ ಬರಿಂಚ್ಚ್ ತುಜಿ ಸಂತತ್ ಅಗಣೀತ್ ಕರ್ತಲೊಂ ಆನಿಂ ಹೊ ಕಾನಾನ್ ಗಾಂವ್ ತುಜ್ಯಾ ಸಂತತೆಚೊ ಜಾತಲೊ" ಮ್ಹಣಾಲೊ. ಆಬ್ರಾಮಾನ್ ಸರ್ವೆಸ್ಪರ್ ದೇವಾಚೆರ್ ವಿಸ್ವಾಸ್ ದವರ್‍ಲೊ ದೆಕುನ್ ಸರ್ವೆಸ್ಪರ್ ದೇವಾನ್ ಆಬ್ರಾಮಾಕ್ "ನಿತಿವಂತ್" ಮ್ಹಣೆಲೆಕ್ಲೊ.

ಪರ್ತ್ಯಾನ್ ಎಕ್ ಪಾವ್ಟಿಂ ಸರ್ವೆಸ್ಪರ್ ದೇವ್ ಆಬ್ರಾಮಾಕ್ ದಿಷ್ಟಿಕ್ ಪಡೊನ್ ಮ್ಹಣಾಲಾಗ್ಲೊ "ಮ್ಹಜೆ ಹುಜ್ರಿಂ ತುಂ ನಿತಿವಂತ್ ಜಾವ್ನಾ ಜಿಯೆಲೊಯ್ ತರ್ ತುಜೆ ಸಂವೆಂ ಹಾಂವೆ ಕೆಲ್ಲೊ ಖರಾರ್ ಥಿರ್ ಕರ್ತಲೊಂ ತುಜೆಂ ಸಂತಾನ್ ವಾಡಯ್ತಲೊಂ"

ತೆದ್ನಾ ಆಬ್ರಾಮ್ ಸರ್ವೆಸ್ಪರ್ ದೇವಾಕ್ ಸರ್ಪಡ್ಲೊ ತವಳ್ ಸರ್ವೆಸ್ಪರ್ ದೇವ್ ಮ್ಹಣಾಲಾಗ್ಲೊ "ಹಾಂವೆ ತುಜೆ ಕಡೆಂ ಕರ್‍ಚೊ ಖರಾರ್ ಹೊ ತುಂ ಸಬಾರ್ ದೇಸಾಂಚೊ ಬಾಪಯ್ ಜಾತಲೊಯ್ ಆಯ್ಚ್ಯಾನ್ ತುಕಾ ಆಬ್ರಾಮ್ ನಹಿಂ ಬಗಾರ್ "ಆಬ್ರಾಹಾಮ್" ಮ್ಹಣ್ ಆಪಯ್ತಲೆ."

ಉಪ್ರಾಂತ್ ಸರ್ವೆಸ್ಪರ್ ದೇವಾನ್ ಆಬ್ರಾಹಾಮಾಚ್ಯಾ ಪತಿಣೆ ವಿಶ್ಯಾಂತ್ "ತಶೆಂಚ್ಚ್ ತುಜೆ ಬಾಯ್ಲೆಕ್ ಆಜ್ ಥಾವ್ನ್ ಸಾರಾಯಿ ನಹಿಂ "ಸಾರಾ" ಮ್ಹಣ್ ಆಪಂವ್ಕ್ ಜಾಯ್.

(ಆಬ್ರಾಹಾವ್ =ಸರ್ವ್ ಜನಾಂಗಾಚೊ ಬಾಪಯ್. ಸಾರಾ=ರಾಣಿ ವ್ ರಾಯ್‌ಸ್ತ್ರಿ).

ಮುಂದುವರಿಯುವದು....

**ಬರಯ್ಣಾರ್: ಜೆ ಸುದಾಸ್**
**(ಡೇವಿಡ್ ಲುವಿಸ್ ತಲ್ಲುರ್).**

---

**ಪ್ರಾರ್ಥನಾ ಮನವಿಗಳು**

- ಮಾರ್ಚ್ ತಿಂಗಳಿನಿಂದ ನಡೆಯುವ ವಾರ್ಷಿಕ ಪರೀಕ್ಷೆಯಲ್ಲಿ ಪ್ರತಿಯೊಂದು ಮಕ್ಕಳು ಉತ್ತಮವಾದ ಅಂಕವನ್ನು ಗಳಿಸಲು ಕರ್ತನು ವಿಶೇಷವಾದ ಜ್ಞಾನ ಮತ್ತು ಆರೋಗ್ಯವನ್ನು ಕೊಡುವಂತೆ ಪ್ರಾರ್ಥಿಸೋಣ.
- ನಮ್ಮ ದೇಶದಲ್ಲಿ ನಡೆಯುತ್ತಿರುವ ಭ್ರಷ್ಟಚಾರ ನಿರ್ಮೂಲನೆಯಾಗುವಂತೆ ಪ್ರಾರ್ಥಿಸೋಣ.
- ಕರ್ನಾಟಕ ರಾಜ್ಯದಲ್ಲಿ ಹಾಗೂ ದೇಶದಲ್ಲಿ ಆಳ್ವಿಕೆ ಮಾಡುತ್ತಿರುವ ಪ್ರತಿಯೊಂದು ಅಧಿಕಾರಿಗಳು ಪ್ರಮಾಣಿಕತೆಯಿಂದ ನಂಬಿಗಸ್ತರಾಗಿ ದೇಶವನ್ನು ಉತ್ತಮವಾದ ರೀತಿಯಲ್ಲಿ ನಡೆಸಿಕೊಂಡು ಹೋಗಲು ದೇವರು ಜ್ಞಾನವನ್ನು ಕೊಡುವಂತೆ ಪ್ರಾರ್ಥಿಸೋಣ.
- ಟಿ.ವಿ. ಮಾಧ್ಯಮ, ರೇಡಿಯೋ ಕರಪತ್ರ, ಮೊಬೈಲ್, ಇಂಟರನೇಟ್‌ಗಳ ಮೂಲಕ ನಡೆಯುತ್ತಿರುವ ಸೇವೆಯನ್ನು ಕರ್ತನು ಆಶೀರ್ವದಿಸಿ ಅಭಿವೃದ್ಧಿಪಡಿಸುವಂತೆ ಇನ್ನು ಅನೇಕ ನಂಬಿಗಸ್ತ ದೇವಸೇವಕರುಗಳು ಎಬ್ಬಿಸಲ್ಪಡುವಂತೆ ಪ್ರಾರ್ಥಿಸಿರಿ.
- ಕರ್ನಾಟಕ ರಾಜ್ಯ ಸರಕಾರದಲ್ಲಿರುವ ಎಲ್ಲಾ ಸಾಲಭಾರಗಳು ನೀಗುವಂತೆ ಪ್ರಾರ್ಥಿಸೋಣ.
- ಕರ್ನಾಟಕ ರಾಜ್ಯದ 99 ತಾಲ್ಲೂಕುಗಳಲ್ಲಿರುವ ಬರಗಾಲ ನೀಗುವಂತೆ ಪ್ರಾರ್ಥಿಸೋಣ.
- ಭಾರತ ದೇಶವು ಸಮೃದ್ಧಿಯುಳ್ಳ ದೇಶವಾಗಿ ಮಾರ್ಪಡುವಂತೆ ಪ್ರಾರ್ಥಿಸೋಣ.

ಯೆಹೋವನು ತನ್ನನ್ನು ಪ್ರೀತಿಸುವವರೆಲ್ಲರನ್ನು ಕಾಪಾಡುತ್ತಾನೆ; ಆದರೆ ಎಲ್ಲಾ ದುಷ್ಟರನ್ನು ಸಂಹರಿಸುತ್ತಾನೆ (ಕೀರ್ತ. 145:20).

# ತಿಳುವಳಿಕೆಯ ಸ್ವರ ವ್ಯಾಮೋಹ ಮತ್ತು ಬಂಧನಗಳು

**"ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ"** (ರೋಮಾ 6:23).

ಪಾಪವು ನಮ್ಮ ದೇಹವನ್ನು ಆತ್ಮವನ್ನೂ ನಾಶಕ್ಕೆ ನಡಿಸುತ್ತದೆ ಎಂದು ದೇವರ ವಾಕ್ಯವು ಹೇಳುತ್ತದೆ. ದಾವೀದನ ಚರಿತ್ರೆಯನ್ನು ನೋಡುವದಾದರೆ ಆತನು ದೇವರಾಶೀರ್ವಾದ ಹೊಂದಿದ ಸೇವಕನಾಗಿದ್ದನು ಎಂದು ನೋಡುತ್ತೇವೆ. ದೇವರೆ ಆತನನ್ನು ಇಸ್ರಾಯೇಲ್ಯರ ರಾಜನಾಗಿ ಅಭಿಷೇಕಿಸಿದನು. ಇಂತಹ ಅಭಿಷೇಕಿಸಲ್ಪಟ್ಟ ಸೇವಕನು ಕೂಡ ಪಾಪಕ್ಕೆ ದಾಸನಾದನು ಎಂದು ನೋಡುತ್ತೇವೆ. ಅಮ್ಮೋನಿಯರೊಂದಿಗೆ ಯುದ್ಧವಾದಾಗ ರಾಜನು ಯುದ್ಧಭೂಮಿಗೆ ಹೋಗದೆ ಆರಾಮವಾಗಿ ಅರಮನೆಯಲ್ಲಿ ಇದ್ದನು ಎಂದು ನೋಡುತ್ತೇವೆ. ಕೆಲಸವಿಲ್ಲದ ಮನಸ್ಸಿನಲ್ಲಿ ಸೈತಾನನು ನೋಡುವ ಆಸೆಯನ್ನು ಹಾಕಿದನು. ರಾಜನು ಹೊರಬಂದು ನೋಡಲಾಗಿ ಸ್ನಾನ ಮಾಡುತ್ತಿದ್ದ ಊರೀಯನ ಹೆಂಡತಿಯಾದ ಬತ್ಶೆಬೆಳನ್ನು ನೋಡಿದನು. ನೋಡಿದ ಕೂಡಲೇ ಆಕೆಯಲ್ಲಿ ಮೋಹಗೊಂಡ ಆತನು ಆಕೆಯನ್ನು ಕರೆಕಳುಹಿಸಿ ಆಕೆಯ ಸಂಗ ಮಾಡಿದನು. ಅಷ್ಟಕ್ಕೆ ಬಿಡದೆ ತನ್ನ ಪಾಪವು ಬೈಲಿಗೆ ಬಾರದಂತೆ ಊರೀಯನನ್ನು ಯುದ್ಧಭೂಮಿಯಿಂದ ಕರತರಿಸಿ ಆತನ ಹೆಂಡತಿಯ ಬಳಿಗೆ ಹೋಗುವಂತೆ ಒತ್ತಾಯಿಸಿದನು. ಊರೀಯನು ಇದಕ್ಕೆ ಒಪ್ಪದಾಗ ಆತನನ್ನು ಯುದ್ಧಭೂಮಿಯಲ್ಲಿ ಕೊಲ್ಲಿಸಲು ಸಂಚು ಮಾಡಿ ಆತನನ್ನು ಕೊಲ್ಲಿಸಿದನು ಎಂದು ನೋಡುತ್ತೇವೆ. ಪಾಪವು ಒಂದು ಪಾಪದಿಂದ ಇನ್ನೊಂದು ಪಾಪಕ್ಕೆ ದಾವೀದನನ್ನು ನಡಿಸುವದನ್ನು ಇಲ್ಲಿ ಕಾಣುತ್ತೇವೆ. **"ಆಶೆಯು ಬಸುರಾಗಿ ಪಾಪವನ್ನು ಹೆರುತ್ತದೆ, ಪಾಪವು ತುಂಬಾ ಬೆಳೆದು ಮರಣವನ್ನು ಹಡೆಯುತ್ತದೆ"** (ಯಾಕೋ. 1:15). ದೇವರು ದಾವೀದನಿಗೆ ಹುಟ್ಟಿದ ಆ ಮಗುವನ್ನು ತೆಗೆದುಕೊಂಡನು. ಪಾಪದ ಫಲವಾದ ಮರಣವು ಅವರ ಜೀವಿತದಲ್ಲಿ ಬಂತು. ಕೆಲಸವಿಲ್ಲದೆ ಆಲಸಿಗಳಾಗಿ ಪಾಪಕ್ಕೆ ದಾಸರಾಗಿದ್ದೇವೋ? ಕೆಲಸವಿಲ್ಲದಾಗ ಸೈತಾನನು ಪಾಪಕರವಾದ ಯೋಚನೆಗಳನ್ನು ನಮ್ಮ ಹೃದಯದಲ್ಲಿ ಹಾಕುವವನಾಗಿದ್ದಾನೆ.

ಈಗಿನ ದಿನಗಳಲ್ಲಿ ಸಾಕಷ್ಟು ಟಿ.ವಿ ಚಾನಲ್‌ಗಳು ಹೊಲಸಾದದ್ದನ್ನು ತೋರಿಸುತ್ತಾ ಯೌವನಸ್ಥ ಮಕ್ಕಳನ್ನು ಪಾಪದ ದಾರಿಗೆ ಎಳೆಯುತ್ತಾ ಇದ್ದೇವೆ. ಇಂಟರ್‌ನೆಟ್ ಜಾಲಗಳು ಕೂಡಾ ಹೊರತಾಗಿಲ್ಲ. ಅಶ್ಲೀಲವಾದದ್ದನ್ನು ಮೊಬೈಲ್ ಫೋನಿನಲ್ಲಿ ಬಿತ್ತರಿಸುವ ಕಂಪನಿಗಳು ಬಂದಿವೆ ಎಚ್ಚರಿಕೆ! ತಮ್ಮ ಚಿಕ್ಕ ಮಕ್ಕಳಿಗೆ ಮೊಬೈಲ್ ಫೋನ್ ತೆಗಿಸಿಕೊಡುವವರಿದ್ದಾರೆ. ಈ ಫೋನನ್ನು ಮಕ್ಕಳು ಯಾವದಕ್ಕೆ ಉಪಯೋಗಿಸುತ್ತಿದ್ದಾರೆ ಎಂದು ಒಮ್ಮೆಯಾದರೂ ನೋಡಿದ್ದೀರಾ? ಚಿಕ್ಕ ಮಕ್ಕಳಿಗೆ ಮೊಬೈಲ್ ಫೋನ್ ಯಾಕೆ ಬೇಕು? ಎಷ್ಟು ಜನ ಮಕ್ಕಳು ಶಾಲೆ ತಪ್ಪಿಸಿ ಇಂಟರ್‌ನೆಟ್ ಅಂಗಡಿಗಳಲ್ಲಿ ಕೂತು ಹೊಲಸು ಚಿತ್ರಗಳನ್ನು ನೋಡುತ್ತಾರೆಂದು ತಂದೆ ತಾಯಂದಿರಿಗೆ ತಿಳಿಯದು! ಒಬ್ಬರು ನನಗೆ ಹೀಗೆ ಹೇಳಿದರು ಮಧ್ಯಾಹ್ನದ ವೇಳೆ ಸಿಟಿಗಳಲ್ಲಿ ಶಾಲೆಗಳಿಗೆ ಹೋಗುವ ಹೆಣ್ಣು ಮಕ್ಕಳು ತಮ್ಮ ಬಾಯ್ ಫ್ರೆಂಡುಗಳ ಜೊತೆ ಪಬ್‌ಗಳಲ್ಲಿ ಕುಳಿತು ಬಿಯರ್ ಕುಡಿಯುತ್ತ ಇರುತ್ತಾರಂತೆ. ನೀವು ನಂಬುತ್ತೀರಾ? ಇದು ಸತ್ಯ ಸಂಗತಿ. ಸಂಜೆ ಶಾಲೆ ಬಿಡುವ ವೇಳೆ ಒಳ್ಳೆಯ ಮಕ್ಕಳಂತೆ ಮನೆಗೆ ಬರುತ್ತಾರೆ! ಲೋಕದ ಆಶೆಗಳಿಗೆ ಸಣ್ಣ ಪ್ರಾಯದಲ್ಲೇ ಬಲಿಯಾಗಿ ತಮ್ಮ ಜೀವಿತವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ.

ಇಹಲೋಕದ ನಮ್ಮ ಸಂಬಂಧಗಳು ಬರಿ ತಾತ್ಕಾಲಿಕ ವಾದವುಗಳಾಗಿವೆ ಎಂಬುದನ್ನು ನಾವು ಮರೆತು ನಾವು ಅವುಗಳಿಗೆ ಜೋತು ಬೀಳುತ್ತೇವೆ. ಮಕ್ಕಳ ಮೇಲಿನ ಅತಿಯಾದ ವ್ಯಾಮೋಹ ಮಕ್ಕಳನ್ನು ತಪ್ಪು ದಾರಿಗೆ ಕೊಂಡೊಯ್ಯ ಬಹುದಾಗಿದೆ. ಯಾಜಕನಾದ ಏಲಿಯ ಚರಿತ್ರೆಯನ್ನು ನೋಡುವದಾದರೆ ಆತನ ಮಕ್ಕಳು ದೇವ ದರ್ಶನದ ಗುಡಾರದ ಹೊರಗೆ ಅನಾಚಾರಗಳನ್ನು ನಡಿಸುವಾಗ ಆತನು ಅವರನ್ನು ಸರಿಯಾಗಿ ಶಿಕ್ಷಿಸಲಿಲ್ಲ. ಕೆಲವು ತಂದೆ ತಾಯಂದಿರು ತಮ್ಮ ಅತಿ ಮುದ್ದಿನಿಂದ ತಮ್ಮ ಮಕ್ಕಳನ್ನು ಕೆಡಿಸುತ್ತಾರೆ.

ಅವರನ್ನು ಚಿಕ್ಕದಿರುವಾಗ ಶಿಕ್ಷಿಸಿದರೆ ಅವರು ತಮ್ಮನ್ನು ದ್ವೇಷಿಸಿ ಯಾರು ಎಂಬ ಭಯದಲ್ಲಿ ಅವರು ಕೇಳಿದ ಹಾಗೆ ತಾವು ಕೇಳಿ, ಅವರು ಮಾಡುತ್ತಿರುವ ಕೆಟ್ಟ ಜೀವಿತವನ್ನು ಸಮರ್ಥಿಸುತ್ತಾರೆ. ನಾಳೆ ದೇವರಿಗೆ ತಾವು ಲೆಕ್ಕ ಕೊಡಬೇಕಾಗಿದೆ ಎಂಬುದನ್ನು ಮರೆತುಬಿಡುತ್ತಾರೆ. ಇನ್ನು ಕೆಲವು ಮನೆಗಳಲ್ಲಿ ತಂದೆ ತಾಯಂದಿರು ಮಕ್ಕಳನ್ನು ತಿದ್ದುವಾಗ ಅಜ್ಜ ಅಜ್ಜಿಯಂದಿರು ಇದಕ್ಕೆ ಅಡ್ಡಿ ಬಂದು ಮಕ್ಕಳು ಕೆಡುವದಕ್ಕೆ ಕಾರಣಾಗುತ್ತಾರೆ. ತಂದೆ ತಾಯಿಯರ ಕಣ್ಣು ತಪ್ಪಿಸಿ ಮಕ್ಕಳು ಮಾಡುವ ಎಲ್ಲಾ ತಪ್ಪುಗಳನ್ನು ತಂದೆ ತಾಯಂದಿರಿಂದ ಅಡಗಿಸುತ್ತಾರೆ. ಇಂತಹ

ಆತನ ನಾಮವೊಂದೇ ಮಹತ್ವವುಳ್ಳದ್ದು; ಆತನ ಪ್ರಭಾವವು ಭೂಮ್ಯಾಕಾಶಗಳಲ್ಲ ಮೆರೆಯುತ್ತದೆ (ಕೀರ್ತ. 148:13).

ತಂದೆ ತಾಯಿ ಇಲ್ಲವೆ ಅಜ್ಜ ಅಜ್ಜಿ ನೀವಾಗಿದ್ದೀರಾ? ದೇವರು ನಿಮ್ಮಿಂದ ಲೆಕ್ಕ ಕೇಳುವ ದಿನದಲ್ಲಿ ಏನು ಉತ್ತರ ಹೇಳುತ್ತೀರಿ? ಒಳ್ಳೆಯ ಕೆಲಸ ಮಾಡಿದಾಗ ಅವರನ್ನು ಹೊಗಳುವ ಮತ್ತು ಪ್ರೋತ್ಸಾಹಿಸುವ ಗುಣವೂ ಇರಬೇಕು. ಕೆಲವು ತಂದೆ ತಾಯಿಯರಂತು ಹೊಡೆಯುವದು ಮತ್ತು ಬಡಿಯುವದು ಮಾತ್ರ ಶಿಕ್ಷೆ ಅಂಥ ತಿಳುಕೊಂಡಿದ್ದಾರೆ. ಅವರಿಗೆ ಮಕ್ಕಳೊಡನೆ ಸಮಯ ಕಳೆಯುವದಕ್ಕೆ ಪುರುಸೊತ್ತಿಲ್ಲ. ಮಕ್ಕಳು ಯಾಕೆ ದಾರಿ ತಪ್ಪುತ್ತಿದ್ದಾರೆ ಎಂದು ತಿಳಿದುಕೊಳ್ಳುವದು ಅವಶ್ಯ. ಅವರ ಮಿತ್ರರು ಯಾರು ಎಂದು ತಿಳುಕೊಂಡಿದ್ದಿರಾ? ಮಕ್ಕಳಿಗೆ ಶಿಕ್ಷೆ ಕೊಡುವ ಇನ್ನೊಂದು ವಿಧವೆಂದರೆ ಮಕ್ಕಳು ತಪ್ಪು ಮಾಡಿದಾಗ ಅವರಿಗೆ ಕೊಡುವ ಸವಲತ್ತುಗಳನ್ನು ಕಡಿಮೆ ಮಾಡುವದು, ನಮಗೆ ಬೇಸರವಾಗಿದೆ ಎಂದು ಅವರು ತಿಳುಕೊಳ್ಳುವಂತೆ ವರ್ತಿಸುವದು. ತಂದೆ ತಾಯಿಯರ ಪ್ರೀತಿ ಗಳಿಸಿಕೊಳ್ಳಬೇಕಾದರೆ ಅವರು ಹೇಳಿದಂತೆ ತಾವು ಕೇಳಬೇಕೆಂದು ಮಕ್ಕಳು ಆಗ ತಿಳದುಕೊಳ್ಳುತ್ತಾರೆ. ಅತಿಯಾದ ಮುದ್ದು ಹೇಗೆ ಹಾನಿಕರವೋ ಅದೇ ರೀತಿ ಅತಿಯಾದ ಶಿಕ್ಷೆ ಕೂಡಾ ವ್ಯತಿರಿಕ್ತಪರಿಣಾಮ ಉಂಟುಮಾಡಬಹುದು. ಚಿಕ್ಕ ಮಕ್ಕಳನ್ನು ದೊಡ್ಡವರ ಸಹವಾಸದಲ್ಲಿ ಇರಿಸುವದು ಕೂಡಾ ಚಿಕ್ಕ ಪ್ರಾಯದಲ್ಲೆ ದಾರಿ ತಪ್ಪುವದಕ್ಕೆ ಕಾರಣವಾಗಬಹುದು. ಇದರಿಂದಾಗಿ ಅವರು ಮಕ್ಕಳಲ್ಲಿ ಸ್ವಾಭಾವಿಕವಾಗಿ ಇರುವ ಮುಗ್ಧತೆಯನ್ನು ಕಳಕೊಳ್ಳುತ್ತಾರೆ! ಯಾವಾದನ್ನು ಚಿಕ್ಕ ಪ್ರಾಯುದಲ್ಲಿ ತಿಳುಕೊಳ್ಳಬಾರದೋ ಅದನ್ನು ತಿಳುಕೊಂಡು ಕೆಟ್ಟುಹೋಗುತ್ತಾರೆ. ಕೆಟ್ಟ ಚಟಗಳಿಗೆ ಚಿಕ್ಕಂದಿನಲ್ಲೇ ಬಲಿಯಾಗುತ್ತಾರೆ. ತಂದೆ ತಾಯಂದಿರೆ ಮಕ್ಕಳನ್ನು ದೊಡ್ಡವರ ಸಹವಾಸದಲ್ಲಿ ಬೆಳೆಯಲು ಬಿಡಬೇಡಿ. ನಿಮ್ಮ ಮಕ್ಕಳು ಅವರ ಪ್ರಾಯಕ್ಕಿಂತ ಹೆಚ್ಚಿನ ಪ್ರಾಯದ ಮಿತ್ರರೊದಿಗೆ ಇದ್ದಾರೋ ನೋಡಿ. ಎಚ್ಚರಿಕೆಯ ಗಂಟೆ ಬಾರಿಸುತ್ತಿದೆಯಾ? ಕೂಡಲೇ ಎಚ್ಚತ್ತುಕೊಳ್ಳಿ. ಇದು ನಿದ್ದೆ ಮಾಡುವ ಸಮಯವಲ್ಲ!

ಲೋಕದ ವಸ್ತುಗಳ ಮೇಲಿನ ವ್ಯಾಮೋಹವು ಕೂಡಾ ನಮ್ಮನ್ನು ನಮ್ಮ ದೇವರಿಂದ ದೂರ ಮಾಡುತ್ತವೆ. ಅದು ಆಸ್ತಿಯ ವ್ಯಾಮೋಹವಾಗಿರಬಹುದು, ಎಷ್ಟು ಆಸ್ತಿ ಇದ್ದರೂ ತೃಪ್ತಿ ಇಲ್ಲ. ಮಕ್ಕಳಿಗೆ ಆಸ್ತಿ ಮಾಡಬೇಕು, ಮೊಮ್ಮಕ್ಕಳಿಗೆ ಆಸ್ತಿ ಮಾಡಿಡಬೇಕು! ಇದು ದುರಾಸೆ. ಚಿನ್ನದ ಮೇಲಿನ ಅತಿಯಾದ ಆಸೆ ಇರಬಹುದು, ಮೊಬೈಲ್ ಫೋನಿನ ಮೇಲಿನ ಆಸೆ ಇರಬಹುದು. ಇದೆಲ್ಲ ಬೇಡ ಎಂದು ನಾನು ಹೇಳುತ್ತಿಲ್ಲ. ಆದರೆ ಕೆಲವು ಯೌವನಸ್ಥರು ಪ್ರತಿ ತಿಂಗಳು ಒಂದು ಹೊಸ ಮೊಬೈಲ್ ಖರೀದಿಸುವ ಚಾಳಿ ಹೊಂದಿದ್ದಾರೆ. ಇದು ವ್ಯಾಮೋಹ. ಸಾಕಷ್ಟು ಚಿನ್ನ ಇದ್ದರೂ ಹೊಸ ಫ್ಯಾಶನಿನ ಚಿನ್ನ ಬಂದಾಗ ಅದಕ್ಕೆ ಆಸೆಪಟ್ಟು ಖರೀದಿಸುವದು. ಎಷ್ಟು ಬಟ್ಟೆಗಳಿದ್ದರೂ ಹೊಸ ಡಿಸೈನಿನ ಬಟ್ಟೆ ಕಂಡಾಕ್ಷಣ ಖರೀದಿಸುವ ಆಸೆ, ಇದು ಸೈತಾನನು ನಮ್ಮ ಜೀವಿತದಲ್ಲಿ ಹಾಕುವ ಒಂದು ಉರುಳಾಗಿದೆ. ಇಂತಹ ಆಸೆ ದೇವರ ಚಿತ್ತಕ್ಕೆ ವಿರುದ್ಧವಾಗಿದೆ (1 ಯೋಹಾ. 2:15–16).ಇಂತಹ ಆಸೆಗಳ ಮೂಲಕ ಸೈತಾನನು ನಮ್ಮನ್ನು ನಮ್ಮ ದೇವರಿಂದ ಅಗಲಿಸಲು ಪ್ರಯತ್ನಿಸುತ್ತಾನೆ. ನಾವು ಎಚ್ಚರಿಕೆ ವಹಿಸೋಣವೇ? ಒಳ್ಳೆದನ್ನು ಮಾಡುವದಕ್ಕೆ ನನಗೇನೋ ಮನಸ್ಸುಂಟು ಆದರೆ ಅದನ್ನು ಮಾಡುವದು ನನ್ನಿಂದಾಗದು. ಅಂತರಾತ್ಮದೊಳಗೆ ದೇವರ ನಿಯಮದಲ್ಲಿ ಆನಂದ ಪಡುವವನಾಗಿದ್ದೇನೆ ಆದರೆ ನನ್ನ ಅಂಗಗಳಲ್ಲಿ ಬೇರೊಂದು ನಿಯಮ ಉಂಟೆಂದು ನೋಡುತ್ತೇನೆ. ಅಯ್ಯೋ ನಾನು ಎಂಥ ದುರವಸ್ಥೆಯಲ್ಲಿ ಬಿದ್ದ ಮನುಷ್ಯನು! ಇಂಥಹ ಮರಣಕ್ಕೆ ಒಳಗಾದ ಈ ದೇಹದಿಂದ ನನ್ನನ್ನು ಬಿಡಿಸುವವನು ಯಾರು? ಬಿಡಿಸುವವನು ಇದ್ದಾನೆಂಬುದಕ್ಕಾಗಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರಿಗೆ ಸ್ತೋತ್ರ. (ರೋಮಾ 7: 19–24).

**ಡಾ। ಡೊನಾಲ್ಡ್ ಸೈಮನ್ಸ್ ಎಂ.ಡಿ.**

---

**ನಗೆಹನಿ**

ಬಸ್ ನದಿಗೆ ಉರುಳಿ ಬಿದ್ದಿತ್ತು. ಜೀವ ಉಳಿಸಿಕೊಳ್ಳಲು ಎಲ್ಲರೂ ಹರಸಾಹಸ ಪಡುತ್ತಿರುವಾಗ ಗುಂಡ ನಿಧಾನ ನೀರಿನಿಂದ ಎದ್ದು ಹೇಳಿದ ................

"ಕಂಡಕ್ಟರ್ ಚಿಲ್ಲರೆ ಕೊಡೋದು ಬಾಕಿಯಿತ್ತು!.

---

ಟೀಚರ್ : ಕೋಲಾರದಲ್ಲಿ ಚಿನ್ನದ ಗಣಿ ಇದೆ, ಕುದುರೆ ಮುಖದಲ್ಲಿ ಏನಿದೆ ಹೇಳು ?

ಗುಂಡ : ಕಣ್ಣು, ಕಿವಿ, ಮೂಗು, ಬಾಯಿ ಎಲ್ಲಾ ಇದೆ ನೀವು ಕುದುರೆಮುಖ ನೋಡಿಲ್ವಾ ಮಿಸ್.

ನಾನೇ ಯೆಹೋವನು ಎಂದು ನಿಮಗೆ ದೃಢವಾಗುವದು. ನಾನು ನನ್ನ ಶ್ವಾಸವನ್ನು ನಿಮ್ಮಲ್ಲಿ ಹೊಗಿಸಿ ನಿಮ್ಮನ್ನು ಬದುಕಿಸಿ ನಿಮ್ಮ ದೇಶದಲ್ಲಿ ನೆಲೆಗೊಳಿಸುವೆನು (ಯೆಹೆ. 37:14).

# ಪ್ರಶ್ನೋತ್ತರಗಳ ಸ್ವರ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

ಹೆಸರು ರಿಕ್ಸನ್ ಜತ್ತನ್ನ ಶಿವಮೊಗ್ಗ

ಪ್ರಶ್ನೆ: ನಮಗೆ ಶೋಧನೆಗಳು ಯಾಕೆ ಬರುತ್ತವೆ? ಅದನ್ನು ಜಯಿಸುವುದು ಹೇಗೆ? (ಯೋಹಾ. 16:33). ನೀವು ನನ್ನಲ್ಲಿದ್ದು ಮನಶ್ಶಾಂತಿಯನ್ನು ಹೊಂದಿದವರಾಗಿರಬೇಕೆಂದು ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ. ಲೋಕದಲ್ಲಿ ನಿಮಗೆ ಸಂಕಟ ಉಂಟು ಧೈರ್ಯವಾಗಿರಿ. ನಾನು ಲೋಕವನ್ನು ಜಯಿಸಿದ್ದೇನೆ ಎಂದು ಹೇಳಿದನು. ನಾವು ಶೋಧನೆ ತುಂಬಿದ ಲೋಕದಲ್ಲಿ ಜೀವಿಸುತ್ತಾ ಇದ್ದೇವೆ. ಸೈತಾನನ ಹೆಸರು ಶೋಧಕನು (ಮತ್ತಾ. 4:3). ಆಗ ಶೋಧಕನು ಆತನ ಬಳಿಗೆ ಬಂದು ನೀನು ದೇವರ ಮಗನಾಗಿದ್ದರೆ ಕಲ್ಲುಗಳು ರೊಟ್ಟಿಯಾಗುವಂತೆ ಅಪ್ಪಣೆಕೊಡು. ಎಲ್ಲಿಯವರೆಗೆ ಈ ಲೋಕದಲ್ಲಿ ಶೋಧಕನು ಇರುತ್ತಾನೋ ಅಲ್ಲಿಯವರೆಗೆ ಶೋಧನೆಗಳು ಕೂಡ ಇರುತ್ತವೆ. ಕರ್ತನಾದ ಯೇಸುಕ್ರಿಸ್ತನು ಮನುಷ್ಯನಾಗಿ ಈ ಲೋಕಕ್ಕೆ ಬಂದಾಗ ಆತನಿಗೂ ಶೋಧನೆಗಳು ಬಂದವು. (ಮತ್ತಾ. 4:1–11 ಲೂಕ. 4:1–13). **"ಯಾಕಂದರೆ ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ; ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು. ಪಾಪ ಮಾತ್ರ ಮಾಡಲಿಲ್ಲ"** (ಇಬ್ರಿ. 4:15). **"ತಾನೇ ಶೋಧಿಸಲ್ಪಟ್ಟು ಬಾಧೆಯನ್ನು ಅನುಭವಿಸಿರುವದರಿಂದ ಶೋಧಿಸಲ್ಪಡುವವರಿಗೆ ಸಹಾಯ ಮಾಡುವದಕ್ಕೆ ಶಕ್ತನಾಗಿದ್ದಾನೆ"** (ಇಬ್ರಿ. 2:18). ಕರ್ತನಾದ ಯೇಸುವಿಗೆ ಶೋಧನೆಗಳು ಬಂದಿರುವಾಗ ಆತನ ಮಕ್ಕಳಾದ ನಮಗೂ ಶೋಧನೆ ಬರುತ್ತದೆ.

ಮೊದಲನೆದಾಗಿ ನಾವು ನೋಡಬೇಕು, ಶೋಧನೆಯು ದೇವರಿಂದ ಬರುವುದಿಲ್ಲ **"ಯಾವನಾದರೂ ಪಾಪಮಾಡುವದಕ್ಕೆ ಪ್ರರೇಪಿಸಲ್ಪಡುವಾಗ ಈ ಪ್ರೇರೆಪಣೆಯು ನನಗೆ ದೇವರಿಂದ ಉಂಟಾಯಿತೆಂದು ಹೇಳಬಾರದು. ದೇವರು ಕೆಟ್ಟದ್ದಕ್ಕೇನೂ ಸಂಬಂಧಪಟ್ಟವನಲ್ಲ; ಆತನು ಯಾರನ್ನೂ ಪಾಪಕ್ಕೆ ಪ್ರೇರೇಪಿಸುವದಿಲ್ಲ. ಆದರೆ ಪ್ರತಿಯೊಬ್ಬನೂ ತನ್ನಲ್ಲಿರುವ ಆಶಾಪಾಶದಿಂದ ಎಳೆಯಲ್ಪಟ್ಟು ಮರುಳುಗೊಂಡವನಾಗಿ ಪ್ರೇರೇಪಿಸಲ್ಪಡುತ್ತಾನೆ. ಆ ಮೇಲೆ ಆಶೆಯು ಬಸುರಾಗಿ ಪಾಪವನ್ನು ಹೆರುತ್ತದೆ; ಪಾಪವು ತುಂಬಾ ಬೆಳೆದು ಮರಣವನ್ನು ಹಡೆಯುತ್ತದೆ"** (ಯಾಕೋ. 1:13–15).

ಎರಡನೆದಾಗಿ ಶೋಧನೆ ಯಾಕೆ ಬರುತ್ತದೆ?

**1) ಕ್ರಿಸ್ತನಲ್ಲಿರುವ ಯಥಾರ್ಥತ್ವವನ್ನು ಪಾತಿವ್ರತ್ಯವನ್ನು ಕೆಡಿಸಲು ಶೋಧನೆ ಬರುತ್ತದೆ: "ಆದರೆ ಹೇಗೆ ಹವ್ವಳು ಸರ್ಪದ ಕುಯುಕ್ತಿಗೆ ಒಳಬಿದ್ದು ಮೋಸಹೋದಳೋ ಹಾಗೆಯೇ ನಿಮ್ಮ ಮನಸ್ಸು ಕ್ರಿಸ್ತನ ವಿಷಯದಲ್ಲಿರಬೇಕಾದ ಯಥಾರ್ಥತ್ವವನ್ನೂ ಪಾತಿವ್ರತ್ಯವನ್ನೂ ಬಿಟ್ಟು ಕೆಟ್ಟುಹೋದಿತೆಂದು ನನಗೆ ಭಯವುಂಟು"** (2 ಕೊರಿ. 11:3).

ಯಥಾರ್ಥತ್ವ: ಯೋಬನ ಜೀವಿತದಲ್ಲಿ ಐಶ್ವರ್ಯ, ಮಕ್ಕಳು, ಆರೋಗ್ಯ ಎಲ್ಲವನ್ನೂ ಕಳಕೊಂಡಾಗ ಯೋಬ. 1:21–22 ರಲ್ಲಿ ದೇವರಿಗೆ ವಿರುದ್ಧವಾಗಿ ಗುಣುಗುಟ್ಟಲಿಲ್ಲ, ಪಾಪ ಮಾಡಲಿಲ್ಲ ಎಂದು ಹೇಳುತ್ತದೆ, ಅನೇಕರು ಕಷ್ಟಗಳು ದು:ಖಗಳು ಬರುವಾಗ ದೇವರಿಗೆ ವಿರುದ್ಧವಾಗಿ ಗುಣುಗುಟ್ಟುತ್ತಾರೆ, ದೂಷಣೆ ಮಾಡುತ್ತಾರೆ, ಯೋಬನ ಹೆಂಡತಿ ಯೋಬ. 2:9–10 ದೇವರಲ್ಲಿರುವ ಯಥಾರ್ಥತ್ವ ಇನ್ನು ಬಿಡಲಿಲ್ಲವೋ ಎಂದು ಯೋಬನನ್ನು ಗದರಿಸಿದಳು. ನಿಜವಾಗಿ ಮಾತನಾಡಿದ್ದು ಯೋಬನ ಹೆಂಡತಿಯಾದರೂ ಈ ಮಾತುಗಳನ್ನಾಡಲು ಈಕೆಯನ್ನು ಪ್ರೇರೆಪಿಸಿದ್ದು ಸೈತಾನನು.

**2) ಪಾತಿವ್ರತ್ಯ:–** ಒಬ್ಬ ಸ್ತ್ರೀ ತನ್ನ ಶೀಲವನ್ನು ಕೆಡಿಸದೇ ಗಂಡನಿಗಾಗಿ ಕಾಪಾಡಲ್ಪಡುವ ಪರಿಶುದ್ಧತೆಗೆ ಹಾಗೂ ನಿಷ್ಕಳಂಕತೆಗೆ ಪಾತಿವ್ರತ್ಯೆ ಎಂಬುದಾಗಿ ಹೇಳುತ್ತಾರೆ. **"ಯಾಕಂದರೆ ದೇವರಲ್ಲಿರುವಂಥ ಚಿಂತೆಯಿಂದಲೇ ನಾನು ನಿಮ್ಮ ವಿಷಯದಲ್ಲಿ ಚಿಂತಿಸುತ್ತೇನೆ. ನಿಮ್ಮನ್ನು ಕ್ರಿಸ್ತನೆಂಬ ಒಬ್ಬನೇ ಪುರುಷನಿಗೆ ಶುದ್ಧಕನ್ಯೆಯಂತೆ ಒಪ್ಪಿಸಬೇಕೆಂದು ನಿಮ್ಮನ್ನು ಆತನಿಗೆ ನಿಶ್ಚಯ ಮಾಡಿದೆನಲ್ಲಾ"** (2 ಕೊರಿ. 11:2). ನಮ್ಮ ದೇಹವು ಪವಿತ್ರಾತ್ಮನ ಗರ್ಭಗುಡಿಯಾಗಿದೆ. ನಾವು ಯೇಸುವಿಗೆ ನಿಶ್ಚಯಿಸಿದ ಕನ್ನಿಕೆಯರು. ಸೈತಾನನು ನಮ್ಮ ಪವಿತ್ರತೆಯನ್ನು ಕೆಡಿಸಲು ಶೋಧನೆ ತರುತ್ತಾನೆ (1 ಕೊರಿ. 3:16–17, 6:19–20).

**3) ಕ್ರಿಸ್ತನ ಮೇಲಿರುವ ನಂಬಿಕೆಯನ್ನು ಕೆಡಿಸಲು: "ಸ್ವಸ್ಥಚಿತ್ತರಾಗಿರಿ, ಎಚ್ಚರವಾಗಿರಿ; ನಿಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ. ನೀವು ನಂಬಿಕೆಯಲ್ಲಿ ದೃಢವಾಗಿದ್ದು ಅವನನ್ನು ಎದುರಿಸಿರಿ; ಲೋಕದಲ್ಲಿರುವ ನಿಮ್ಮ ಸಹೋದರರೂ ಅಂಥ ಬಾಧೆಗಳನ್ನೇ ಅನುಭವಿಸುತ್ತಿದ್ದಾರೆಂದು ನಿಮಗೆ ತಿಳಿದಿದೆಯಲ್ಲಾ"** (1 ಪೇತ್ರ. 5:8–11).

ಯೆಹೋವನ ಆನಂದವೇ ನಿಮ್ಮ ಆಶ್ರಯವಾಗಿದೆ

(ನೆಹೆ. 8:10).

3 ಶೋಧನೆಯನ್ನ ಜಯಿಸುವು ಹೇಗೆ? ಎ) ದೇವರ ವಾಕ್ಯವನ್ನು ಹೃದಯದಲ್ಲಿ ಶೇಖರಿಸಿಡುವುದರ ಮೂಲಕ : "ದೇವರ ಧರ್ಮೋಪದೇಶವು ಅವನ ಹೃದಯದಲ್ಲಿರುವದು; ಅವನು ಜಾರುವದೇ ಇಲ್ಲ"(ಕೀರ್ತ. 37:31). "ನಿನಗೆ ವಿರೋಧವಾಗಿ ಪಾಪಮಾಡದಂತೆ ನಿನ್ನ ನುಡಿಗಳನ್ನು ಹೃದಯಲ್ಲಿಟ್ಟು ಕೊಂಡಿದ್ದೇನೆ" (ಕೀರ್ತ. 119:11). "ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಮೃದ್ಧಿಯಾಗಿ ವಾಸಿಸಲಿ" (ಕೊಲೊ. 3:16). ಕರ್ತನಾದ ಯೇಸುಕ್ರಿಸ್ತನು ಸೈತಾನನ್ನು ದೇವರ ವಾಕ್ಯದ ಮೂಲಕ ಜಯಿಸಿದನು (ಮತ್ತಾ. 4:1–11, ಲೂಕ. 4:1–13).

ಬಿ) ಸಮರ್ಪಣೆಯುಳ್ಳ ಜೀವಿತ: "ಆದದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನಂದರೆ ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕ ಪೂರ್ವಕವಾದ ಆರಾಧನೆಯು"(ರೋಮ. 12:1–2).

ಸಿ) ಪರಿಶುದ್ಧತೆಗಾಗಿ ತೀರ್ಮಾನ ಇರಬೇಕು: "ಎಲ್ಲಾ ಕಾರ್ಯಗಳನ್ನು ಮಾಡುವದಕ್ಕೆ ನನಗೆ ಸ್ವಾತಂತ್ರ್ಯವೇನೋ ಉಂಟು, ಆದರೆ ಎಲ್ಲವೂ ವಿಹಿತವಾಗಿರುವದಿಲ್ಲ. ಎಲ್ಲಾ ಕಾರ್ಯಗಳನ್ನು ಮಾಡುವದಕ್ಕೆ ನನಗೆ ಸ್ವಾತಂತ್ರ್ಯ ವುಂಟು, ಆದರೆ ನಾನು ಯಾವದಕ್ಕೂ ಒಳಗಾಗುವದಿಲ್ಲ" (1 ಕೊರಿ. 6:12). "ಎಲ್ಲಾ ಕಾರ್ಯಗಳನ್ನು ಮಾಡುವದಕ್ಕೆ ಸ್ವಾತಂತ್ರ್ಯವುಂಟು, ಆದರೆ ಎಲ್ಲವೂ ವಿಹಿತವಾಗಿರುವದಿಲ್ಲ. ಎಲ್ಲಾ ಕಾರ್ಯಗಳನ್ನು ಮಾಡುವದಕ್ಕೆ ಸ್ವಾತಂತ್ರ್ಯಉಂಟು, ಆದರೆ ಎಲ್ಲವೂ ಭಕ್ತಿಯನ್ನು ಬೆಳೆಸುವದಿಲ್ಲ" (1 ಕೊರಿ. 10:23).

4) ಕಣ್ಣುಗಳೊಡನೆ (ಶರೀರದ ಅಂಗಗಳೊಡನೆ ನಿಂಬಧನೆ ಮಾಡಬೇಕು) ಯೋಬ. 31:1.

5) ಆದಿ. 39:9–13 ಪಾಪದಿಂದ, ಪಾಪದ ಸ್ಥಳದಿಂದ ಶೋಧನೆ ಬರುವ ಸ್ಥಳದಲ್ಲಿ ನಿಲ್ಲಬಾರದು (1 ಕೊರಿ. 6:18).

6) ಮತ್ತಾ. 26:41 ಎಚ್ಚರವಾಗಿದ್ದು ಪ್ರಾರ್ಥಿಸಬೇಕು.

7) ಆದಿ 14:21–23 ಸದೋಮ್ ಗೋಮರದ ಅರಸನಿಂದ ಹಣವನ್ನು ನಿರಾಕರಿಸಿದನು (2 ಅರಸು. 5:15–17).

ಮುಂದುವರಿಯುವದು.....

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

## ಜ್ಞಾನಕ್ಕಾಗಿಪ್ರಶ್ನೆಗಳು : ನಮ್ಮ ಪ್ರಶ್ನೆ ನಿಮ್ಮ ಉತ್ತರ

1. ಅತೀ ದೊಡ್ಡ ಸಮುದ್ರ ಪಕ್ಷಿ ಯಾವುದು?
2. ವಿದ್ಯುತ್ ಬಲ್ಬ್‌ನಲ್ಲಿರುವ ಫಿಲಿಮೆಂಟನ್ನು ಯಾವುದರಿಂದ ಮಾಡಲಾಗಿದೆ?
3. ಕೈಗಾ ಸ್ಥಾವರ ಯಾವುದಕ್ಕೆ ಸಂಬಂಧಿಸಿದ್ದಾಗಿದೆ?
4. ಪ್ರಪಂಚದ ಅತೀ ಚಿಕ್ಕ ದೇಶ ಯಾವುದು?
5. ಬೆಂಗಳೂರಿನಲ್ಲಿರುವ ವಿಮಾನ ತಯಾರಿಕಾ ಕಾರ್ಖಾನೆ ಯಾವುದು?
6. ಪಿ.ವಿ.ಸಿ ಪೈಪುಗಳ ತಯಾರಿಕೆಯಲ್ಲಿ ಉಪಯೋಗಿಸಲ್ಪಡುವ ವಸ್ತು ಯಾವುದು?
7. ಪುರುಷರಿಗಿಂತ ಮಹಿಳೆಯನ್ನು ಅಧಿಕ ಸಂಖ್ಯೆಯಲ್ಲಿ ಹೊಂದಿರುವ ರಾಜ್ಯ ಯಾವುದು?
8. ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಕೋಫಿ ಅನ್ನನ್ ಯಾವ ದೇಶದವರು?
9. ಮಂಗಳದ ಅಂತರಿಕ್ಷದಲ್ಲಿ ಅತೀ ಹೆಚ್ಚು ಇರುವ ರಾಸಾಯನಿಕ ವಸ್ತು ಯಾವುದು?
10. ನವ ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿ ಯಾರು?

**ಫೆಬ್ರವರಿ ತಿಂಗಳ ಜ್ಞಾನಕ್ಕಾಗಿ ಪ್ರಶ್ನೆಗಳು ಇದರ ಸರಿ ಉತ್ತರಗಳು:**

1) 1945, 2) ವಾರೆನ್ ಬಫೆಟ್, 3) 32 ನೇ ವಿಧಿ 4) ಗಾಯಟರ್, 5) ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, 6) ಗೌರಿಬಿದನೂರು, 7) ಹಳದಿ, 8) ಪೆಂಗ್ವಿನ್, 9) 76, 10) ಎಗ್‌ಲೇರ್ಸ್

ಯೆಹೋವನು ಒಳ್ಳೆಯವನು; ಇಕ್ಕಟ್ಟಿನ ದಿನದಲ್ಲಿ ಆಶ್ರಯದುರ್ಗವಾಗಿದ್ದಾನೆ
(ನಹೂಮ. 1:7).

# ಸಂಗ್ ಡ್ಯೂ
# “ಎರಡು ಸಾರಿ ಮರಣ ಹೊಂದಿದ ರಕ್ತಸಾಕ್ಷಿ”

ಜಪಾನ್ ದೇಶದ ನೂತನ ರಕ್ತಸಾಕ್ಷಿಗಳಲ್ಲಿ ಒಬ್ಬರಾಗಿದ್ದಾರೆ ಸಂಗ್ ಡ್ಯೂ. ಯೌವ್ವನ ಪ್ರಾಯದಲ್ಲಿ ಅವನೊಬ್ಬ ಕ್ರೈಸ್ತ ಬೋಧಕನಾದನು ಆದರೆ ಎರಡನೇ ವಿಶ್ವವಿದ್ಯಾಲಯ ಮುಂಚಿತವಾಗಿ ಜಪಾನ್‌ನ ಒತ್ತಾಯದ ಮೇಲೆ ಅವರು ದೇವಾಲಯವನ್ನು ಆರಾಧನೆ ಮಾಡಲು ಪ್ರಾರಂಭಿಸಿದರು, ಇದರಿಂದ ಕ್ರೈಸ್ತರು ಸಂಗ್ ಡ್ಯೂರನ್ನು ವಿರೋಧಿಸಿದರು. ಆದ್ದರಿಂದ ಕಣ್ಣೀರಿನಿಂದ ತನ್ನ ತಪ್ಪನ್ನು ಅರಿಕೆ ಮಾಡಿದರು. ನಿನ್ನ ನಂಬಿಕೆ ತ್ಯಜಿಸಬೇಕಾಗಿ ಬಂದರೆ ಅದಕ್ಕೆ ಮುಂಚಿತವಾಗಿ ಕ್ರಿಸ್ತನಿಗೋಸ್ಕರವಾಗಿ ಸಾಯುತ್ತೇನೆ ಎಂಬುದಾಗಿ ಪ್ರತಿಜ್ಞೆ ಮಾಡಿದನು ಆ ಪ್ರತಿಜ್ಞೆ ನೆರವೇರಿಸಲು 2 ಸಾರಿ ಸಾಯಬೇಕಾಗಿ ಬಂತು.

ದೇವರ ಸೇವೆಗಾಗಿ ಸಿದ್ಧನಾಗುವಂತೆ ಸಂಗ್ ಸತ್ಯವೇದ ಶಾಲೆಗೆ ಹೋದನು. ಹಸ್ತಾರ್ಪಣದ ನಂತರ ಸುಯಂಗ್ ಕಾನ್‌ನಲ್ಲಿ ಸಭಾಪಾಲಕರಾದರು. ಆದರೆ ಕಮ್ಯೂನಿಷ್ಟರು ಅವರನ್ನು ಹಿಡಿದು ಕಣಿವೆಯಲ್ಲಿ ಗುಲಾಮ ಕೆಲಸ ಮಾಡಿಸಿದರು. ಭಾನುವಾರ ಕೆಲಸ ಮಾಡಬೇಕಾಗಿ ಹೇಳಿದಾಗ ಅವರು ನಿರಾಕರಿಸಿದರು, ಆದುದರಿಂದ ಬಹಳ ಕ್ರೂರವಾಗಿ ದಂಡಿಸಿದರು. ನಂತರವಾಗಿ ನದಿಗೆ ಎಸೆದರು ಕೆಲವು ನಿಮಿಷಗಳೊಳಗೆ ವಿರೋಧಿಗಳು ಅಲ್ಲಿಂದ ದೂರ ಹೋದಾಗ ಸಂಗ್ ಡ್ಯೂ ಸಭೆಯ ಕೆಲವು ಸದಸ್ಯರು ಸೇರಿ ಅವರ ಶರೀರವನ್ನು ದಡಕ್ಕೆ ಎಳೆದರು ಅವರನ್ನು ಗ್ರಾಮಕ್ಕೆ ಒಯ್ದು ಸಮಾಧಿ ಮಾಡಲಿಕ್ಕೆ ಸಿದ್ಧಮಾಡಿದಾಗ ಸಂಗ್ ಡ್ಯೂ ಜೀವ ಇದೆ ಎಂದು ತಿಳಿದರು. ಆದರೆ ಕೆಲವು ತಿಂಗಳುಗಳ ನಂತರ ಪ್ರಸಂಗ ಮಾಡುವಾಗ ಕಮ್ಯುನಿಷ್ಟರು ಆತನನ್ನು ಬಂಧಿಸಿ ಬಂದೂಕಿನಿಂದ ಗುಂಡು ಹಾರಿಸಿ ಕೊಂದರು.

ಕರ್ತನಲ್ಲಿ ಪ್ರಿಯರೇ, ಸಂಗ್ ಡ್ಯೂರ ಜೀವಿತವನ್ನು ಗಮನಿಸಿದಾಗ ನಮಗೆ ಸಿಗುವ ಉತ್ತೇಜನವು ನಮ್ಮನ್ನು ಅಪನಂಬಿಗಸ್ತಿಕೆಯಿಂದ ನಂಬಿಗಸ್ತಿಕೆಗೆ, ಹೇಡಿತನದಿಂದ ಧೈರ್ಯಕ್ಕೆ ನಡೆಸುತ್ತದೆ. ಪೆಂತಕೋಸ್ತಿನ ದಿನದಿಂದ ಸಭೆ ಹುಟ್ಟಿದರಭ್ಯ ಕ್ರಿಸ್ತನ ಹಿಂಬಾಲಕರು ಇಷ್ಟದಿಂದ ಅರ್ಪಿಸಿದರು. ತಮ್ಮಲ್ಲೇ ಸಹಸ್ರಾರು ಜನ ಹತರಾದರು. ಸುವಾರ್ತೆಯ ವೃದ್ಧಿಗಾಗಿ ಹಾಗಾಗಿ ಅವರು ಹೊಂದಿದರು ಜೀವದ ಕಿರೀಟವ ಕರ್ತನನ್ನು ಪ್ರೀತಿಸಿದ ಅಪೋಸ್ತಲರು ಹಿಂಸೆಯ ಹಾದಿಯಲ್ಲಿ ಕರ್ತನನ್ನು ಇಷ್ಟದಿಂ ಅನುಸರಿಸಿದರು.

- ಯೋಹಾನನು ಒಬ್ಬಂಟಿಗನಾಗಿ ಪತ್ಮೋಸ್‌ಗೆ ಗಡಿಪಾರಾದನು.
- ಸ್ತೇಫನನು ಕುಪಿತ ಜನರಿಂದಾಗಿ ಕಲ್ಲಿನಿಂದ ಹತನಾದನು.
- ಮತ್ತಾಯನು ಪರ್ಶಿಯದಲ್ಲಿ ಜನರ ಗುಂಪಿನಿಂದ ಇರಿಯಲ್ಪಟ್ಟನು.
- ಮಾರ್ಕನ ಕಾಲುಗಳನ್ನು ಕುದುರೆಗಳು ವಿಶುದ್ಧ ದಿಕ್ಕಿನಲ್ಲಿ ಎಳೆದು ಹತನಾದನು.
- ವೈದ್ಯ ಲೂಕನು ಕ್ರೂರದಿ ಗಲ್ಲಿಗೇರಿಸಲ್ಪಟ್ಟನು.
- ಪೇತ್ರ, ಫಿಲಿಪ್ಪ, ಸಿಮೋನ ಶಿಲುಬೆಗೇರಿಸಲ್ಪಟ್ಟರು.
- ಬಾರ್ತಲೋಮನು ಅನ್ಯಜನರಿಂದ ಜೀವಂತ ಚರ್ಮಸುಲಿಯಲ್ಪಟ್ಟನು.
- ತೋಮನ ದೇಹವನ್ನು ಭಾರತದಲ್ಲಿ ಐದು ಕುದುರೆಗಳು ಬೇರೆ ಬೇರೆ ಕಡೆಗೆ ಎಳೆದು ಹತನಾದನು.
- ಪುಟ್ಟ ಯಾಕೋಬನು ಹರಿತ ಗರಗಸದಿಂದ ಕೊಯ್ಯಲ್ಪಟ್ಟನು.
- ಕರ್ತನ ತಮ್ಮ ಯಾಕೋಬನು ಕಲ್ಲಿನಿಂದ ಹತನಾದನು.
- ಯೂದನು ಕಂಬಕ್ಕೆ ಕಟ್ಟಲ್ಪಟ್ಟು ಬಾಣಗಳಿಂದ ಹತನಾದನು.
- ಮತ್ತಾಯನು ಯೆರೂಸಲೇಮಿನಲ್ಲಿ ಶಿರಚ್ಛೇದನ ಕ್ಕೊಳಗಾದನು.
- ಪೌಲನು ರ್ತಕಸಾಕ್ಷಿಯಾದನು ನೀರೋ ಚಕ್ರಾಧಿಪತ್ಯದೊಳು.

ಹೌದು ಪ್ರಿಯರೇ, ಕ್ರಿಸ್ತನನ್ನು ಕಂಡುಕೊಂಡ ನಂತರವಾಗಿ ಅನೇಕರು ನಿಮ್ಮನ್ನು ಹಿಂಸೆಮಾಡಬಹುದು **“ನಾವು ಆತನೊಡನೆ ಸತ್ತಿದ್ದರೆ ಆತನೊಡನೆ ಜೀವಿಸುವೆವು; ಸಹಿಸಿಕೊಳ್ಳುವವರಾಗಿದ್ದರೆ ಆತನೊಡನೆ ಆಳುವೆವು; ನಾವು ಯೇಸುವಿನವರಲ್ಲವೆಂದು ಹೇಳಿದರೆ ಆತನು ನಮ್ಮನ್ನು ತನ್ನವರಲ್ಲವೆಂದು ಹೇಳುವನು”** (2 ತಿಮೊ. 2:12). ಅಂಥ ಸಂದರ್ಭದಲ್ಲಿ ಹಿಂಜರಿದು ಹೋಗಬೇಡಿ. ನೀವು ಯಾವುದೇ ಜಾತಿ ಆಚಾರ ಸಂಪ್ರದಾಯಗಳನ್ನು ಬಿಟ್ಟು ಬಂದಿರುವುದಾದರೆ ತಿರುಗಿ ನಿಮ್ಮ ಬಂಧು ಮಿತ್ರರು ಸುತ್ತಮುತ್ತಲಿನ ಜನರು ಅದೇ ಕಾರ್ಯವನ್ನು ಮಾಡುವುದಕ್ಕೆ ಬೆದರಿಕೆ ಹಾಕುವುದಾದರೆ ಭಯಪಡಬೇಡಿರಿ ಕ್ರಿಸ್ತನ ನಿಮಿತ್ತವಾಗಿ ಸ್ಥಿರವಾಗಿ ನಿಲ್ಲಿರಿ. **“ಇದಲ್ಲದೆ ದೇಹವನ್ನು ಕೊಂದು ಆತ್ಮವನ್ನು ಕೊಲ್ಲಲಾರದವರಿಗೆ ಹೆದರಬೇಡಿರಿ, ಆತ್ಮ**

ನಾನು ಯೆಹೋವನ ದೃಷ್ಟಿಯಲ್ಲಿ ಮಾನ್ಯನು, ನನ್ನ ದೇವರೇ ನನಗೆ ಬಲವು
(ಯೆಶಾ. 49:5).

**ದೇಹ ಎರಡನ್ನೂ ಕೂಡ ನರಕದಲ್ಲಿ ಹಾಕಿ ನಾಶಮಾಡಬಲ್ಲಾತನಿಗೆ ಹೆದರಿರಿ"** ಮತ್ತಾ. 10:28). ಈ ಲೋಕದ ಖಡ್ಗವಾಗಲೀ, ಬೆಂಕಿಯಾಗಲಿ, ಸೆರೆಮನೆಯಾಗಲಿ, ಯಾವ ಹಿಂಸೆಯಾಗಲಿ ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸಲು ಸಾಧ್ಯವಿಲ್ಲ.

ಕ್ರಿಸ್ತನಿಗೋಸ್ಕರವಾಗಿ ರಕ್ತಸಾಕ್ಷಿಯಾಗುವುದೇ ಅದೊಂದು ಶ್ರೇಷ್ಠವಾದ ಭಾಗ್ಯ ಇದರಲ್ಲಿ ಕರ್ತನ ಅಪೋಸ್ತಲರು, ಅನೇಕ ಭಕ್ತರು ಹಾದು ಹೋದರು. ರಕ್ತಸಾಕ್ಷಿಯಾಗುವಂಥದು ಪರಲೋಕದಲ್ಲಿ ನನಗೆ ಕಿರೀಟಧಾರಣೆಯಾಗುತ್ತದೆ. ಅದಕೋಸ್ಕರವಾಗಿ ಅಲ್ಲ, ಪ್ರಿಯರೇ ಯಾರು ಪ್ರೀತಿಸದ ಸಮಯದಲ್ಲಿ ನನ್ನ ಕರ್ತನು ನಿನ್ನನ್ನು ಪ್ರೀತಿಸಿದ್ದಾನೆ. ಅದಕ್ಕಾಗಿಯೇ ಎಂಬುದು ನಿಮ್ಮ ತೀರ್ಮಾನವಾಗಿರಲಿ. ಒಂದಲ್ಲ ಒಂದು ದಿನ ಅಂಥಾ ಸಂದರ್ಭ ನಿಮಗೆದುರಾಗಿ ಬಂದರೂ ಕೂಡಾ ಕರ್ತನ ಆತ್ಮನು ನಿಮ್ಮನ್ನು ಬಲಪಡಿಸಲಿ ಆ ಶ್ರೇಷ್ಠವಾದ ಓಟವನ್ನು ಮುಗಿಸು ಮುಂದೆ ನಿಮಗಾಗುವ ಮಹಿಮಾ ಸ್ವಾಸ್ಥ್ಯದೊಳಗೆ ನಿಲ್ಲಿ.

ಕರ್ತನು ತಾನೇ ನಿಮ್ಮೆಲ್ಲರನ್ನು ಚೀಯೋನಿನಿಂದ ಹೇರಳವಾಗಿ ಆಶೀರ್ವದಿಸಲಿ.

# ರಕ್ಷಣೆಯ ಮಾರ್ಗ ಯಾವದು?

1881ನೇ ಇಸವಿಯ ಪ್ರಾರಂಭದಲ್ಲಿ ಉತ್ತರ ಸ್ಕಾಟ್‌ಲೆಂಡಿನ ಪೂರ್ವ ತೀರದಲ್ಲಿ ಅನೇಕ ದಿನಗಳ ವರೆಗೆ ಭಯಂಕರವಾದ ಬಿರುಗಾಳಿಯುಂಟಾಗಿತ್ತು. ಆಗ ಒಂದು ಹಡಗು ದಡಕ್ಕೆ ಬಡಿಯಲ್ಪಟ್ಟಿತು. ಅದು ಅಮೇರಿಕಾದಿಂದ ಜರ್ಮನಿಗೆ ಬರುತ್ತಿತ್ತು. ಬಹಳ ಹೊತ್ತು ಅದು ಬಿರುಗಾಳಿಯೊಡನೆ ಹೋರಾಡುತ್ತಾ ಕಡೆಗೆ ಸ್ಕಾಟ್‌ಲೆಂಡಿನ ದಡಕ್ಕೆ ಅಪ್ಪಳಿಸಿತು. ಆಗ ಅದನ್ನು ಸಮುದ್ರದ ಮಧ್ಯಕ್ಕೆ ನಡಿಸುವದು ಅಸಾಧ್ಯವಾಗಿತ್ತು. ಆ ದಡವು ಬಂಡೇಕಲ್ಲುಗಳಿಂದ ನಿಬಿಡವಾಗಿತ್ತಾದರೂ ದೇವರ ಕೃಪೆಯಿಂದ ಹಡಗು ಬಂಡೆಗೆ ಅಪ್ಪಳಿಸಲಿಲ್ಲ. ಬೆಸ್ತರು ದೋಣಿ ಇಳಿಸುತ್ತಿದ್ದ ಒಂದು ಕೊರಕಲಲ್ಲಿ ಸೇರಿಕೊಂಡಿತು. ಅದು ಅಲ್ಲಿಂದ ದಡಕ್ಕೆ 25 ಮಾರು ದೂರವಿತ್ತು.

ಕೆಲವೇ ನಿಮಿಷಗಳಲ್ಲಿ ಸುತ್ತಲಿನ ಬೆಸ್ತರೆಲ್ಲಾ ಅಲ್ಲಿ ನೆರೆದರು. ಅಲ್ಲಿಗೆ ರಕ್ಷಣೆಯ ದೋಣಿಗಳನ್ನು ಬಿಡುವದು ಸಾಧ್ಯವಿರಲಿಲ್ಲ. ರಾಕೆಟ್ ಯಂತ್ರವನ್ನು ಮಾತ್ರ ಉಪಯೋಗಿಸಬಹುದಾಗಿತ್ತು. ಆ ಯಂತ್ರವನ್ನು ಕೆಲವೆಡೆಗಳಲ್ಲಿ 4.5 ಅಡಿ ಆಳವಾಗಿ ಹಿಮದಲ್ಲಿ ಎಳೆದು ತರಬೇಕಾಯಿತು. ಆದರೂ ಜನಬಲದ ಪ್ರಯತ್ನದಿಂದ ಅದನ್ನು ಹೇಗೂ ಅಲ್ಲಿಗೆ ತಂದರು. ಪ್ರಳಯಕಾಲದ ತೆರೆಯು ಎದ್ದು ಆ ಹಡಗನ್ನು ಹೊಡೆದು ಉರುಳಿಬಿಡುವದೋ ಎಂಬಂತೆ ಜನರಲ್ಲಿ ಕ್ಷೋಭೆಯೂ ಆತುರವೂ ಉತ್ಪನ್ನವಾದವು. ಅಲ್ಲಿದ್ದ ವೃದ್ಧರಾರೂ ಅಂಥ ನೀರನ್ನು ಅದುವರೆಗೆ ಕಂಡಿರಲಿಲ್ಲ.

ಸಮುದ್ರವು ಉಕ್ಕೇರುತ್ತಿದ್ದಿತು. ಪ್ರತಿ ನಿಮಿಷವೂ ಭಯಾಜನಕವಾಗಿತ್ತು. ರಾಕೆಟ್ ಯಂತ್ರದಿಂದ ಹಡಗಿಗೆ ಹಗ್ಗವನ್ನು ಹಾಕುವ ಹಲವು ಪ್ರಯತ್ನಗಳು ಮಾಡಲ್ಪಟ್ಟವು. ಆದರೆ ಗಾಳಿಯ ಮಹಾ ರಭಸದಿಂದ ಹಾರಿದ ಹಗ್ಗಗಳೆಲ್ಲವೂ ಹಡಗನ್ನು ಮುಟ್ಟುವ ಮುಂಚೆ ನೀರಿಗೆ ತಳ್ಳಲ್ಪಟ್ಟವು. ಕಡೆಯಲ್ಲಿ ಒಂದು ಖಾಲಿ ಪೀಪಾಯಿಗೆ ಹಗ್ಗವನ್ನು ಕಟ್ಟಿ ಹಡಗಿಗೆ ಎಸೆದರು. ಹಡಗಿನಲ್ಲಿದ್ದವರು ಅಸಾಧಾರಣ ಪ್ರಯತ್ನದಿಂದ ಆ ಹಗ್ಗವನ್ನು ಎಳೆದುಕೊಂಡು ಎದುರಿನ ಕೂವೆ ಮರಕ್ಕೆ ಕಟ್ಟಿದರು.

ಹಡಗಿನಲ್ಲಿ ಹನ್ನೊಂದು ಮಂದಿ ನಾವಿಕರಿದ್ದರು. ಆದರೆ 4.5 ಮಂದಿ ಮಾತ್ರ ಕೆಲಸಮಾಡುವ ಚೈತನ್ಯವುಳ್ಳವರಾಗಿದ್ದರು. ಉಳಿದವರು ಗಾಳಿ ಬಡಿತಕ್ಕೂ ಶೀತಕ್ಕೂ ಸಿಲುಕಿ ಬಲಗುಂದಿ ಬಿದ್ದಿದ್ದರು. ರಾಕೆಟ್ ಯಂತ್ರವು ಕೆಲಸವನ್ನು ಆರಂಭಿಸಿತು. ರಕ್ಷಣೆಯ ಗೂಡು ಹಗ್ಗದ ಮೇಲೆ ಚಲಿಸತೊಡಗಿತು. ಆಗ ಒಬ್ಬ ತರುಣನು ನಾವಿಕನನ್ನು ಗೂಡಿನಲ್ಲಿ ಹಾಕಿದನು. ಒಂದೆರಡು ನಿಮಿಷಗಳಲ್ಲಿ ಅವನು ಸ್ನೇಹಿತರ ಕೈಗಳಲ್ಲಿ ಇಳಿದನು.

ಈ ಪ್ರಥಮ ನಾವಿಕನನ್ನು ಸುರಕ್ಷಿತವಾಗಿ ಇಳಿಸಿದ್ದದ್ದೇ ತಡ. ಅಷ್ಟರಲ್ಲಿ ಸಮುದ್ರವು ಅಲ್ಲೋಲಕಲ್ಲೋಲವಾಯಿತು. ಹಡಗಿನ ಮೇಲೆ ಗಾಳಿಯು ಬಿರುಸಾಗಿ ಬೀಸಿತು. ಹಡಗಿನ ಹಿಂಭಾಗವು ಫಕ್ಕನೆ ಎತ್ತಲ್ಪಟ್ಟು ಬಂಡೆಯ ಮೇಲೆ ಹಾಕಲ್ಪಟ್ಟಿತು. ಆಚೆ ಈಚೆ ತೂಗುತ್ತಾ ಇನ್ನೊಂದು ಬಂಡೆಗೆ ಬಡಿದು ಹಡಗು ಒಡೆಯಿತು. ನಡುವಿನ ಕೂವೆ ಮರವು ಚೂರು ಚೂರಾಯಿತು. ರಾಕೆಟ್ ಯಂತ್ರವು ಸಿಕ್ಕಿಕೊಂಡು ಕೆಲಸ ಮಾಡಲಾರದೆ ಹೋಯಿತು.

ಈ ಗಂಡಾಂತರದಲ್ಲಿ ಹರಿಯುತ್ತಿದ್ದ ಮಂಜಿನ ರಾಶಿಯನ್ನು ಸೀಳಿಕೊಂಡು ಹಡಗಿನಿಂದ ಒಬ್ಬನು ಕೆಳಗಿಳಿದು ತನ್ನ ರಕ್ಷಣೆಗಾಗಿ ಹಗ್ಗವನ್ನು ಹಿಡಿಯುವದಕ್ಕೆ ಪ್ರಯತ್ನಿಸುತ್ತಾ ಪೇಚಾಡುತ್ತಿದ್ದನು. ಆದರೆ ಅವನ ಆ ಯತ್ನವು ನಿಜವಾಗಿಯೂ ವ್ಯರ್ಥವಾಗಿದ್ದಿತು.

ಕುಸಿದು ಬೀಳುವ ಮನೆಗಳಂತೆ ತೆರೆಗಳು ಅವನ ಮೇಲೆ ಒಂದೇ ಸಮನೆ ಉರುಳುತ್ತಿದ್ದವು. ಆ ಬಡಪಾಯಿಯು ಹಡಗಿನಿಂದ ಸ್ವಲ್ಪ ದೂರಹೋದನು. ಅಷ್ಟರಲ್ಲಿ ಒಂದು ದೊಡ್ಡ ತೆರೆಯು ಎದ್ದು ಅವನನ್ನು ಅಪ್ಪಳಿಸಿದ್ದರಿಂದ ಅವನ ಅವಸ್ಥೆಯು ತೀರಿತೆಂದು ತೋರಿತು. ಆ ತೆರೆಯು ಇಳಿದ ಮೇಲೆ ಆ ಬಲಿಷ್ಠನು ರಟ್ಟೆಯನ್ನು ಕೊಂಕಿಸಿಕೊಂಡು ಹಗ್ಗಕ್ಕೆ ಜೋಲುತ್ತಾ

ಯೆಹೋವನು ತಾನೇ ನಿನ್ನ ಮುಂದುಗಡೆ ಹೋಗುವನು. ಆತನೇ ನಿನ್ನ ಸಂಗಡ ಇರುವನು (ಧರ್ಮೋ. 31:8).

ಸಂಕಟಪಡುತ್ತಿದ್ದನು. ಮತ್ತೊಂದು ಕ್ಷಣದಲ್ಲಿ ಎದುರು ತರಂಗರಾಶಿಯಲ್ಲಿ ಅವನು ಮುಳುಗಿಯೇ ಹೋದನು.

ಎರಡು ದಿನಗಳ ನಂತರ ಅವನ ಮೃತ ದೇಹವನ್ನು ತೆಗೆದಾಗ ಅವನು ಹಗ್ಗದ ಮೇಲೆ ಜೋತಾಡುತ್ತಿದ್ದಾಗ ಬಡಿದ ಆ ತೆರೆಯ ಪೆಟ್ಟಿನಿಂದ ಅವನ ಎರಡು ಭುಜಗಳ ಕೀಲು ತಪ್ಪಿಹೋಗಿದ್ದವೆಂದು ತಿಳಿದುಬಂತು.

ಈ ಮನುಷ್ಯನು ಮುಳುಗಿಹೋದ ಸ್ವಲ್ಪಹೊತ್ತಿನಲ್ಲಿ ಬಂಡೆಗಳೆಡೆಯಲ್ಲಿ ಸಿಕ್ಕಿಕೊಂಡ ಹಡಗು ಪುನ: ಎತ್ತಲ್ಪಟ್ಟು ಅದು ದಡದ ಕಡೆಗೆ ತೇಲಿತು. ರಾಕೆಟ್ ಯಂತ್ರವು ತೊಡಕಿನಿಂದ ಬಿಡಿಸಲ್ಪಟ್ಟು ಕೆಲಸಮಾಡುವಂತಾಯಿತು. ಆ ನಿರ್ಭಾಗ್ಯ ಹಡಗಿನ ಹಲಗೆಗಳು ಒಂದೊಂದಾಗಿ ಕಳಚುತ್ತಿದ್ದದರಿಂದ ಜನರು ಅವಸರಗೊಂಡರು. ಅರ್ಧಗಂಟೆಯೊಳಗಾಗಿ ನಾವಿಕರೆಲ್ಲರೂ ದಡಕ್ಕೆ ಇಳಿಸಲ್ಪಟ್ಟರು. ಶಕ್ತಿಯಿದ್ದವರು ಶಕ್ತಿಯಿಲ್ಲದವರನ್ನು ಮೊದಲು ಇಳಿಸಿದರು. ಆ ಹತಭಾಗ್ಯ ಹಡಗಿನಿಂದ ನೌಕಾಧಿಕಾರಿಯನ್ನು ಇತರ ನಾವಿಕರನ್ನು ಸುರಕ್ಷಿತವಾಗಿ ದಡಕ್ಕೆ ಇಳಿಸಲು ತುಂಬಾ ಸಹಾಯಮಾಡುತ್ತಿದ್ದ ಒಬ್ಬ ಧೈರ್ಯಶಾಲಿಯಾದ ನಾವಿಕನು ಮಾತ್ರ ಹಡಗಿನಲ್ಲಿ ಉಳಿದನು. ಅವನು ಕಡೇವರೆಗೂ ಶಾಂತ ಭಾವದಿಂದಲೂ ಧೈರ್ಯದಿಂದಲೂ ಇದ್ದನು. ಅದನ್ನು ನೋಡಿದವರೆಲ್ಲಾ ಆಶ್ಚರ್ಯದಿಂದ ಬೆರಗಾದರು. ಬಳಿಕ ಅವನು ದಡವನ್ನು ಸೇರುತ್ತಲೇ **"ನೀನು ಅಷ್ಟು ಶಾಂತಚಿತ್ತದಿಂದಿರಲು ಕಾರಣವೇನು"** ಎಂದು ಎಲ್ಲರೂ ತವಕದಿಂದ ಕೇಳಿದರು. ಆಗ ಅವನು **"ನಾನು ಅಮೇರಿಕಾದಲ್ಲಿ ಮೂಡಿ ಎಂಬವರ ಬೋಧನೆಯಿಂದ ರಕ್ಷಣೆ ಹೊಂದಿದೆನು. ಯೇಸು ನನ್ನ ರಕ್ಷಕನಾಗಿರಲು ಯಾವ ಭಯವೂ ನನಗೆ ಇಲ್ಲ ಎಂಬ ನಂಬಿಕೆ ಇದ್ದದರಿಂದ ನಾನು ರಕ್ಷಿಸಲ್ಪಡುವೆನೆಂದು ತಿಳಿದಿದ್ದೆನು"** ಅಂದನು. ಬಳಿಕ ಸಮುದ್ರದಲ್ಲಿ ಮುಳುಗಿಹೋದ ಆ ಮನುಷ್ಯನ ವಿಷಯವನ್ನು ಕೇಳಿದರು. ಅದಕ್ಕವನು **"ಅಂಥ ನಿರರ್ಥಕವಾದ ಪ್ರಯತ್ನಕ್ಕೆ ಹೋಗಬೇಡವೆಂದು ನಾವು ಅವನನ್ನು ಬಹಳವಾಗಿ ತಡೆದೆವು. ಆದರೆ ಅವನು ನಮ್ಮ ಮಾತನ್ನು ಕೇಳಲಿಲ್ಲ. ತನ್ನ ಛಲವನ್ನು ಬಿಡಲಿಲ್ಲ"** ಅಂದನು. ಆಗ ನೌಕಾಧಿಕಾರಿಯು ಕಣ್ಣೀರು ಸುರಿಸುತ್ತಾ **"ಅವನು ಒಳ್ಳೆಯವನಾಗಿದ್ದನು, ಇಡೀ ನೌಕೆಯಲ್ಲಿ ಅವನಷ್ಟು ಒಳ್ಳೆಯವನು ಯಾರೂ ಇರಲಿಲ್ಲ. ಆದರೆ ಸ್ವೇಚ್ಛೆಯಿಂದ ತನ್ನನ್ನು ತಾನೇ ರಕ್ಷಿಸಿಕೊಳ್ಳಲು ಪ್ರಯತ್ನಿಸಿದ್ದರಿಂದ ಮುಳುಗಿ ಸತ್ತನು. ಉಳಿದವರೆಲ್ಲರೂ ಬೇರೆಯವರಿಂದ ರಕ್ಷಿಸಲ್ಪಟ್ಟರು"** ಅಂದನು.

ನೀರಿನ ಮಟ್ಟವು ಇಳಿಯುವಾಗ ಎಲ್ಲವೂ ನೆಲಸಮವಾಗಿ ಹೋಗಿತ್ತು. ಒಡೆದ ಹಲಗೆ ಚೂರುಗಳು ಮುರಿದ ಮರದ ತುಂಡುಗಳು ಪುಡಿಯಾದ ಪೀಪಾಯಿಗಳೂ ಚೆಲ್ಲಿಹೋಗಿ ಭಯಂಕರವಾಗಿ ತೋರುತ್ತಿತ್ತು. ಆದರೆ ಸುತ್ತಲೂ ನೋಡಿ ಆ ಮುಳುಗಿ ಹೋದವನ ನೆನಪಾಗುತ್ತಲೇ ಬೇರೆಲ್ಲಿಯೂ ಕಾಣದ ಭಯಭಕ್ತಿ ಭಾವನೆಯು ಮೊಳೆಯುತ್ತಿತ್ತು.

ಇಡೀ ನೌಕೆಯಲ್ಲಿ ಅತಿ ಶ್ರೇಷ್ಠನಾದವನು ಮುಳುಗಿ ಹೋದನೋ? ಅದು ಸಾಧ್ಯವೇ? ಇದಕ್ಕೆ ಕಾರಣವೇನಂದರೆ, ಅವನಲ್ಲಿ ತನ್ನನ್ನು ತಾನೇ ರಕ್ಷಿಸಿಕೊಳ್ಳಬೇಕೆಂಬ ಆತುರವಿತ್ತು. ಲಭ್ಯವಾದ ಸಹಾಯ ಅನುಕೂಲತೆಗಳನ್ನು ಆಶ್ರಯಿಸದೆ ತಾನು ತೆರೆಗಳನ್ನು ಎದುರಿಸಬಲ್ಲೆನೆಂಬ ತನ್ನ ಬಲವನ್ನೇ ನಂಬಿಕೊಂಡಿದ್ದನು.

ತಮ್ಮ ರಕ್ಷಣೆಗಾಗಿ ಏನನ್ನೂ ಮಾಡಲಾರದೆ ಬಲಗುಂದಿ ಕಂಗೆಟ್ಟರೂ ಬೇರೆಯವರು ತಮ್ಮ ಪ್ರಯತ್ನವೇನೂ ಇಲ್ಲದೆ ರಕ್ಷಿಸಲ್ಪಟ್ಟರು. ಆ ವಿಪತ್ತಿನಲ್ಲಿ ಸಹಾಯವಾದ ಆ ರಕ್ಷಣೋಪಾಯಕ್ಕೆ ಶರಣಾಗುವದಲ್ಲದೆ ಇವರು ಹೆಚ್ಚಿಗೆ ಏನು ತಾನೇ ಮಾಡಬಲ್ಲರು?

ವಾಚಕರೇ, ನೀವೇನು ಹೇಳುವಿರಿ? ನಿಮ್ಮ ಆತ್ಮೀಯ ಪರಿಸ್ಥಿತಿಯು ಆ ಹಡಗಿನಲ್ಲಿದ್ದವರಿಗಿಂತಲೂ ಹೆಚ್ಚಿನ ಅಪಾಯದಲ್ಲಿರುವದು. ನೀವು ದೇವರ ಸಹಾಯದಿಂದ ನಿತ್ಯಜೀವವನ್ನು ಪಡೆಯಲು ಸಿದ್ಧರಾಗಿರುವಿರಾ? ಇಲ್ಲದಿದ್ದರೆ ಒಂದು ದಿನ ನಿಮ್ಮ ಮೇಲೆ ಬರಲಿಕ್ಕಿರುವ ದೇವರ ನ್ಯಾಯ ತೀರ್ಪೆಂಬ ಆ ಪ್ರಚಂಚದ ಬಿರುಗಾಳಿಯು ಎಷ್ಟು ಭಯಂಕರವಾಗಿರುವದು! ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇರದು. ಆ ನಾವಿಕರಂತೆ ನೀವು ಕೂಡ ರಕ್ಷಣೆಯನ್ನು ಹೊಂದುವ ಒಂದು ಮಾರ್ಗವಿದೆ. ಅದು ನಿಮ್ಮ ಸ್ವಂತ ಪ್ರಯತ್ನಗಳನ್ನು ಬಿಟ್ಟುಬಿಟ್ಟು ದೇವರು ಸಿದ್ಧಮಾಡಿರುವ ರಕ್ಷಣಾಮಾರ್ಗವನ್ನು ಆಶ್ರಯಿಸುವದಾಗಿದೆ. ದೇವರು ನಿಮ್ಮ ಪಾಪಗಳನ್ನು ಯೇಸುವಿನ ಮೇಲೆ ಹಾಕಿ ನಿಮ್ಮ ಬದಲಾಗಿ ಆತನನ್ನು ಶಿಕ್ಷಿಸಿದನು ಎಂದು ನಂಬಿ ಆತನನ್ನು ಮರೆಹೋಗುವದಾಗಿದೆ. ಆ ನಿಸ್ಸಹಾಯಕರಾದ ಜನರು ಸುಮ್ಮನೆ ರಕ್ಷಣೆ ಗೂಡಿನಲ್ಲಿ ತಾವು ಸೇರಿಕೊಂಡು ಪಾರಾದಂತೆ ನೀವು ದೇವರ ರಕ್ಷಣಾಮಾರ್ಗ ಒಂದನ್ನೇ ಆಶ್ರಯಿಸಿರಿ. ಅಂದರೆ ಯೇಸುವಿನಲ್ಲಿ ದೃಢವಿಶ್ವಾಸವಿಟ್ಟು ಪಾರಾಗಿರಿ. ಆಗ ನಿಜವಾಗಿಯು ನಿಮಗೆ ರಕ್ಷಣೆಯಾಗವದು. ಅಲ್ಲದೆ ಆ ಜನರು ತಮ್ಮ ಸ್ವಪ್ರಯತ್ನಗಳಿಂದ ರಕ್ಷಣೆಯನ್ನು ಹೊಂದದೆ ಸೋತುಹೋದಂತೆ ನೀವೂ ನಿಮ್ಮ ಸ್ವಪ್ರಯತ್ನಗಳಿಂದಾಗಲೀ ಇನ್ನಾವ ಉಪಾಯಗಳಿಂದಾಗಲೀ ರಕ್ಷಣೆಯನ್ನು ಹೊಂದಲಾರಿರಿ. ಯಾಕಂದರೆ ನಮಗೆ ರಕ್ಷಣೆಯನ್ನು ಕೊಡುವಂಥ ಶ್ರೇಷ್ಠ ನಾಮವು ಯೇಸು ಎಂಬದಲ್ಲದೆ ಲೋಕದಲ್ಲಿ ಮತ್ತ್ಯಾವದೂ ಇಲ್ಲ. **"ರಕ್ಷಣೆಯು ಇನ್ನಾರಲ್ಲಿಯೂ ಇಲ್ಲ; ಯಾಕಂದರೆ ಆಕಾಶದ ಕೆಳಗೆ ಮನುಷ್ಯರಲ್ಲಿ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗವದಿಲ್ಲ"** (ಅ.ಕೃ. 4:12).

– ಸಂಗ್ರಹ.

ನನ್ನ ವಾಕ್ಯವನ್ನು ಕಾಪಾಡಿದ್ದರಿಂದ ಇಗೋ, ನಿನ್ನೆದುರಿನಲ್ಲಿ ಒಂದು ಬಾಗಿಲನ್ನು ತೆರೆದಿಟ್ಟಿದ್ದೇನೆ (ಪ್ರಕ. 3:8).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 9945710676, 9242649814**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

## ಪ್ರಿಯ ವಾಚಕರ ಗಮನಕ್ಕೆ...

"ದೇವರ ಸ್ವರ" ಮಾಸ ಪತ್ರಿಕೆಯು ಅಂದರೆ ಮಾರ್ಚ್ 2012ನೇ ಸಂಚಿಕೆಯು ಈಗಾಗಲೇ ನಿಮ್ಮ ಕೈ ಸೇರಿದೆ. ಅದಕ್ಕಾಗಿ ದೇವರಿಗೆ ಸ್ತೋತ್ರ. ನಿಮ್ಮ ಪ್ರಾರ್ಥನೆಯಲ್ಲಿ ಈ ಪತ್ರಿಕೆಗಾಗಿಯೂ ಹಾಗೂ ಇದರ ಮೂಲಕ ನಿಮ್ಮಂತಹ ಸಾವಿರಾರು ಜನರು ಆಶೀರ್ವದಿಸಲ್ಪಡಲು ಪ್ರಾರ್ಥಿಸಿ ಮತ್ತು ಇತರರಿಗೆ ಇದನ್ನು ಪರಿಚಯಿಸಿರಿ. ವಾರ್ಷಿಕ ಚಂದಾ ರೂಪಾಯಿ 120/- ವರ್ಷಕ್ಕೆ.

ಸಂಪಾದಕರು

**ನಮ್ಮ ವಿಳಾಸ :**
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115
ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org

**ನಮ್ಮ ಕಛೇರಿ ವಿಳಾಸ :**
ಡಿಜಿಎಂ ಬೇತೇಲ್ ಕಛೇರಿ,
ವಿಶ್ವಾಸದ ಮನೆ, ಬೇತೇಲ್ ಚರ್ಚ್, ಯೇಸುಪುರ,
ಶಂಕರಪುರ ಅಂಚೆ, ಉಡುಪಿ – 574115,
ಕರ್ನಾಟಕ, ಭಾರತ. Ph: (0820) 2589070, 2002781
E-mial: dgmofficial@gmail.com

# ಸ್ಥಳೀಯ ಮತ್ತು ವಿದೇಶ ಸುದ್ದಿ

- ಭಾರತಿಯ ವಾಯುಪಡೆಗೆ 126 ಸಮರ ವಿಮಾನಗಳನ್ನು ಪೂರೈಸುವ 1,040 ಕೋಟಿ ಡಾಲರ್ ಮೊತ್ತದ ಗುತ್ತಿಗೆ ಫ್ರೆಂಚ್ ಕಂಪೆನಿ ಡಸಾಲ್ಟ್ ರಾಫೇಲ್ ಪಾಲಾಗಿದೆ. ಸಮರ ವಿಮಾನ ಖರೀದಿ ಕುರಿತಂತೆ ಇದು ಭಾರತದ ಇದುವರೆಗಿನ ಅತ್ಯಂತ ದೊಡ್ಡ ವ್ಯವಹಾರವಾಗಿದೆ.
- ರೈತರಿಗೆ ಶೇ. 3ರ ಬಡ್ಡಿದರದಲ್ಲಿ ನೀಡಲಾಗುತ್ತಿರುವ ಮಧ್ಯಮಾವಧಿ ಹಾಗೂ ದೀರ್ಘಾ ವಧಿ ಕೃಷಿ ಸಾಲದ ಮೊತ್ತವನ್ನು ರೂ. 10ಲಕ್ಷದಿಂದ 20ಲಕ್ಷರೂ.ಗೆ ಹೆಚ್ಚಿಸುವ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ.
- ಭ್ರಷ್ಟಜನ ಸೇವಕರ ವಿರುದ್ಧ ವಿಚಾರಣೆಗೆ ಅನುಮತಿ ಮಂಜೂರು ಮಾಡಲು ನಾಲ್ಕು ತಿಂಗಳ ಕಾಲಮಿತಿ ವಿಧಿಸಿದ ಮಹತ್ವದ ತೀರ್ಪನ್ನು ಸುಪ್ರೀಂ ಕೋರ್ಟ್ ನೀಡಿದೆ.
- ಉತ್ತರಕೊರಿಯಾ ಮೊಬೈಲ್ ನಿಷೇಧ: ಉತ್ತರ ಕೊರಿಯಾದ ನಾಗರಿಕರು ಇನ್ನು ಮುಂದೆ ಯಾವುದೇ ಕಾರಣಕ್ಕೂ ಮೊಬೈಲ್ ಫೋನ್ ಉಪಯೋಗಿಸುವಂತಿಲ್ಲ. ಮೊಬೈಲ್ ಫೋನ್‌ನಲ್ಲಿ ಮಾತನಾಡುವುದನ್ನು ಕಂಡರೆ ಅವರನ್ನು 'ಯುದ್ಧ ಅಪರಾಧಿ'ಎಂದು ಪರಿಗಣಿಸಿ ಶಿಕ್ಷಿಸಲಾಗುವದು ಎಂದು ಅಲ್ಲಿನ ಸರಕಾರ ಎಚ್ಚರಿಸಿದೆ.
- ಬಡವರೂ ಸೇರಿದಂತೆ ದೇಶದ ಶೇ. 75ರಷ್ಟು ಜನರಿಗೆ ಕಡಿಮೆ ಬೆಲೆಗೆ ಆಹಾರ ಒದಗಿಸುವ ಖಾತ್ರಿ ನೀಡುವಂಥ, ಬಹು ನಿರೀಕ್ಷಿತ ಆಹಾರ ಭದ್ರತಾ ಮಸೂದೆಯನ್ನು ಕೇಂದ್ರ ಸಚಿವ ಸಂಪುಟ ಅಂಗೀಕರಿಸಿದ್ದರೂ ಸಹ ಅದು ಪರಿಪೂರ್ಣ ಗೊಳ್ಳುವದಕ್ಕೆ ಇನ್ನೂ ಬಹಳ ದೂರವಿದೆ ಆದಾಗ್ಯೂ ಸಹ ಈ ಮಸೂದೆ ಈಗಾಗಲೇ ಆರ್ಥಿಕ ತಜ್ಞರಲ್ಲಿ ಭೀತಿಯನ್ನು ಸೃಷ್ಟಿಸಿದೆ. ಹಲವಾರು ಯೋಜನೆಗಳಿಗಾಗಿ ಈಗಾಗಲೇ ಸಾಕಷ್ಟು ಹಣ ವ್ಯಯಿಸುತ್ತಿರುವಂಥ ಸಂದರ್ಭದಲ್ಲಿ ಈ ಮಸೂದೆಯಿಂದಾಗಿ ಸರ್ಕಾರದ ಮೇಲೆ ಆರ್ಥಿಕ ಹೊರೆ ಹಲವು ಪಟ್ಟು ಹೆಚ್ಚಲಿದೆ ಎಂಬ ಆತಂಕದಲ್ಲಿದ್ದಾರೆ ಆರ್ಥಿಕ ತಜ್ಞರು.
- ವಿಜ್ಞಾನಕ್ಷೇತ್ರ : ಪ್ರಧಾನಿ ಕಳವಳ: ವೈಜ್ಞಾನಿಕ ರಂಗದಲ್ಲಿ ಚೀನಾದಂತಹ ದೇಶಗಳೂ ಭಾರತವನ್ನು ಹಿಂದಿಕ್ಕಿರುವದಕ್ಕೆ ತೀವ್ರ ಕಳವಳ ವ್ಯಕ್ತಪಡಿಸಿರುವ ಪ್ರಧಾನಿಯವರು ದೇಶದ ವೈಜ್ಞಾನಿಕ ಕ್ಷೇತ್ರವನ್ನು ಬಲಪಡಿಸಲು 12ನೇ ಪಂಚವಾರ್ಷಿಕ ಯೋಜನೆಯ ಅಂತ್ಯದೊಳಗೆ ಸಂಶೋಧನೆ ಹಾಗೂ ಅಭಿವೃದ್ಧಿಗಾಗಿ ಖರ್ಚುಮಾಡುವ ಮೊತ್ತವನ್ನು ದ್ವಿಗುಣಗೊಳಿಸಲಾಗುತ್ತದೆ ಎಂದು ಪ್ರಕಟಿಸಿದ್ದಾರೆ.
- ಬೆಲರೂಸ್‌ನ 22ರ ಹರೆಯದ ಚೆಲುವೆ ವಿಕ್ಟೋರಿಯಾ ಅಜರೆಂಕಾ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ವನಿತಾ ಸಿಂಗಲ್ಸ್ ಚಾಂಪಿಯನ್ ಪಟ್ಟ ಅಲಂಕರಿಸಿ ವೃತ್ತಿ ಜೀವನದ ಮೊದಲ ಗ್ರ್ಯಾನ್‌ಸ್ಲಾಮ್ ಗೆದ್ದ ಸಾಧನೆ ಮಾಡಿದ್ದಾರೆ. ಬೋನಸ್ ಎಂಬಂತೆ ವಿಶ್ವದ ನಂ.1 ಆಟಗಾರ್ತಿಯಾಗಿ ಹೊರಹೊಮ್ಮಿದ್ದಾರೆ.
- ರೊಮಾನಿಯಾ: ತೀವ್ರ ಚಳಿಯಿಂದಾಗಿ ಕಪ್ಪು ಸಮುದ್ರ ಹಿಮಗಟ್ಟಿದ ಪರಿಣಾಮವಾಗಿ ಕೋಸ್ಟಂಟಾ ಕಡಲ ತೀರದಲ್ಲಿ ಹಡಗೊಂದು ಮುಂದೆ ಸಾಗಲಾರದೆ ಸಿಕ್ಕಿಹಾಕಿಕೊಂಡಿದೆ. ಚಳಿಗೆ ಪೂರ್ವ ಯುರೋಪಿನಲ್ಲಿ 79 ಮಂದಿ ಬಲಿಯಾಗಿದ್ದಾರೆ.
- ಫಿಲಿಪ್ಪೀನ್ಸ್‌ನ ಮೂರನೇ ಅತ್ಯಂತ ದೊಡ್ಡ ದ್ವೀಪ ನೆಗ್ರೋಸ್‌ನಲ್ಲಿ ಸಂಭವಿಸಿದ ಭಾರೀ ಭೂಕಂಪದಲ್ಲಿ ಶಾಲಾ ಮಕ್ಕಳ ಸಹಿತ ಕನಿಷ್ಠ 44 ಮಂದಿ ಮೃತಪಟ್ಟಿದ್ದಾರೆ. ನೆಗ್ರೋಸ್ ದ್ವೀಪದ ಡುಮಾಗೇಟ್ ನಗರದಿಂದ ಸುಮಾರು 70 ಕಿ.ಮೀ. ದೂರದಲ್ಲಿ ಕಂಪನದ ಕೇಂದ್ರವಿತ್ತು. ರಿಕ್ಟರ್ ಮಾಪಕದಲ್ಲಿ ಕಂಪನದ ತೀವ್ರತೆ 6.9 ಇತ್ತು. ಭೂಕಂಪದಿಂದ ಹಲವು ಕಟ್ಟಡಗಳು ಕುಸಿದಿವೆ ಮತ್ತು ವಿದ್ಯುತ್ ಪೂರೈಕೆ ಸ್ಥಗಿತಗೊಂಡಿದೆ.
- ದೇಶದ ಮೇಲಿರುವ ಭಯೋತ್ಪಾದನೆ ಬೆದರಿಕೆಯನ್ನು ಪರಾಮರ್ಶಿಸುವ ಮತ್ತು ಬಂಧನ ಹಾಗೂ ಶೋಧ ಕಾರ್ಯಾಚರಣೆ ನಡೆಸುವ ಕಾನೂನು ಸಮ್ಮತ ಅಧಿಕಾರ ಹೊಂದಿರುವ ಪ್ರಬಲ ರಾಷ್ಟ್ರೀಯ ಭಯೋತ್ಪಾದನೆ ನಿಗ್ರಹ ಕೇಂದ್ರ (ಎನ್‌ಸಿಟಿಸಿ) ವನ್ನು ಸರಕಾರ ಪ್ರಾರಂಭಿಸಲಿದೆ.

---

## ನಗೆಹನಿ

* "ಅಲ್ರೀ, ಸ್ತ್ರೀಯರು ಕೈಗಳಿಗೆ ಗಾಜಿನ ಬಳೆಗಳನ್ನೇಕೆ ತೊಡುತ್ತಾರೆ?"
"ಯಾಕೆಂದ್ರೆ, ಸೊಸೆ ಕೆಲಸ ಮಾಡುತ್ತಿದ್ದಾಳೆ ಎಂದು ಅತ್ತೆಗೆ ತಿಳಿಯಬೇಕಲ್ಲ".

* ಟೀಚರ್ : "ಗುಂಡ, ನೀನು ಲೆಕ್ಕದಲ್ಲಿ ತುಂಬಾ ವೀಕ್. ನೀನು ಯಾರ ಬಳಿಯಲ್ಲಾದರೂ ಟ್ಯೂಷನ್‌ಗೆ ಹೋಗು".

ಗುಂಡ : "ಸಾರ್, ನಾನು ಟ್ಯೂಷನ್‌ಗೆ ಹೋಗುವುದರಿಂದ ಯಾವ ಉಪಯೋಗವೂ ಇಲ್ಲ. ನನ್ನ ತಂದೆ ಟ್ಯೂಷನ್‌ಗೆ ಹೋದರೆ ಒಳ್ಳೆಯದು."

ಟೀಚರ್: "ನೀನು ಹೇಳುತ್ತಿರುವುದು ನನಗೆ ಅರ್ಥವಾಗುತ್ತಿಲ್ಲ".

ಗುಂಡ : "ನಾನು ಹೋಂವರ್ಕ್ ಮಾಡುವುದಿಲ್ಲ. ಪ್ರತಿಯೊಂದು ನಮ್ಮ ಅಪ್ಪನೇ ಬರೆದುಕೊಡುವುದು".

---

ಈ ಸ್ಥಳದಲ್ಲಿ ಸಮಾಧಾನವನ್ನು ಅನುಗ್ರಹಿಸುವೆನು ಇದು ಸೇನಾಧೀಶ್ವರ ಯೆಹೋವನ ನುಡಿ
(ಹಗ್ಗಾ. 2:9).

**ಲೂಕನ ಸುವಾರ್ತೆ 1ರಿಂದ6 ಅಧ್ಯಾಯಗಳವರೆಗೆ ಪ್ರಶ್ನೆಗಳನ್ನು ಮತ್ತು ಪ್ರತಿ ಪ್ರಶ್ನೆಗೂ ಎರಡೆರಡು ಉತ್ತರಗಳನ್ನು ಕೊಡಲಾಗಿದೆ. ನೀವು ಸತ್ಯವೇದವನ್ನು ಸರಿಯಾಗಿ ಓದಿ ಅವುಗಳಲ್ಲಿ ಸರಿಯಾದ ಉತ್ತರವನ್ನು ಗುರುತಿಸಿ ಕಳುಹಿಸಿರಿ.**

**ಮಕ್ಕಳ ಸ್ವರ**

1. ಲೂಕನ ಸುವಾರ್ತೆಯು ಹೊಸ ಒಡಂಬಡಿಕೆಯ
   (1) 4ನೇ (2) 3ನೇ ಪುಸ್ತಕವಾಗಿದೆ.
2. ಎಲಿಸಬೇತಳಿಗೆ
   (1) ಮಕ್ಕಳಿರಲಿಲ್ಲ (2) ಇಬ್ಬರು ಮಕ್ಕಳಿದ್ದರು
3. ಜಕರೀಯನು ಒಬ್ಬ
   (1) ಪ್ರವಾದಿಯಾಗಿದ್ದನು (2) ಯಾಜಕನಾಗಿದ್ದನು.
4. ಜಕರೀಯನು ಕರ್ತನ ದೂತನ ಮಾತನ್ನು ನಂಬದೆ ಹೋದದ್ದರಿಂದ ಎಲ್ಲಾ ಸಂಭವಿಸುವವರೆಗೂ
   (1) ಮೂಕನಾಗಿದ್ದನು (2) ಕುರುಡನಾಗಿದ್ದನು.
5. ಗಬ್ರಿಯೇಲ್ ದೂತನು ಮರಿಯಳನ್ನು ಸಂಧಿಸಿದ ಊರು
   (1) ಯೂದಾಯ (2) ನಜರೇತ್
6. ಯೇಸುವು
   (1) ಪರಾತ್ಪರನ ಪ್ರವಾದಿ (2) ಪರಾತ್ಪರನ ಕುಮಾರ ನೆನೆಸಿಕೊಳ್ಳುವನು ಎಂದು ದೂತನು ಹೇಳಿದನು.
7. ಯೋಸೇಫನು
   (1) ದಾವೀದನು ಮನೆತನದವನಾಗಿದ್ದನು (2) ಸೌಲನ ಮನೆತನದವನಾಗಿದ್ದನು.
8. ಕರ್ತನ ದೂತನು ರಾತ್ರಿಯಲ್ಲಿ
   (1) ರಾಜರಿಗೆ ಕಾಣಿಸಿಕೊಂಡನು (2) ಕುರುಬರಿಗೆ ಕಾಣಿಸಿಕೊಂಡನು.
9. ಇಸ್ರಾಯೇಲ್ ಜನರನ್ನು ಸಂತೈಸುವವನು ಯಾವಾಗ ಬಂದನೆಂದು ಕಾಯುತ್ತಿದ್ದವನು.
   (1) ಯೋಸೇಫನು (2)ಸಿಮೆಯೋನನು
10. ಅನ್ನಳು ಒಬ್ಬ
    (1) ಪ್ರವಾದಿನಿ (2) ರಾಣಿ ಆಗಿದ್ದಳು.
11. ಯೋಹಾನನು ಜನರಿಗೆ
    (1) ನೀರಿನ ಸ್ನಾನ (2) ಬೆಂಕಿಯ ಸ್ನಾನ ಮಾಡಿಸುವವನಾಗಿದ್ದನು
12. ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆಕಾಶದಿಂದ ಆತನ ಮೇಲೆ ಇಳಿದವರು
    (1) ದೂತನು (2) ಪವಿತ್ರಾತ್ಮನು
13. ಯೇಸುವು ದೇವರಾತ್ಮನಿಂದ ಅಡವಿಯಲ್ಲಿ ನಡೆಸಲ್ಪಟ್ಟ ದಿನಗಳು
    (1) ನಲವತ್ತು (2) ಮೂವತ್ತು
14. ನಜರೇತಿನ ಯೇಸುವೇ ನಮ್ಮ ಗೊಡವೆ ನಿನಗೇಕೆ? ನಮ್ಮನ್ನು ನಾಶಮಾಡುವುದಕ್ಕೆ ಬಂದಿಯಾ? ನಿನ್ನನ್ನು ಬಲ್ಲೆವು ಎಂದು ಹೇಳಿದವರು
    (1) ದೆವ್ವ (2) ಸೈತಾನನು
15. ಯೇಸುವು ಗೆನೇಜರೆತ್ ಕೆರೆಯ ಅಂಚಿನಲ್ಲಿ ನಿಂತಿದ್ದಾಗ ಅಲ್ಲಿ ಬೆಸ್ತರು
    (1) ಮೀನು ಹಿಡಿಯುತ್ತಿದ್ದರು (2) ಬಲೆಗಳನ್ನು ತೊಳೆಯುತ್ತಿದ್ದರು.
16. ಸ್ವಾಮೀ, ನಾನು ಪಾಪಾತ್ಮನು, ನನ್ನನ್ನು ಬಿಟ್ಟು ಹೋಗಬೇಕು ಅಂದವನು.
    (1) ಪೇತ್ರನೆಂಬ ಸೀಮೋನ (2) ಮತಾಭಿಮಾನಿ ಎನ್ನಿಸಿಕೊಂಡ ಸೀಮೋನ.
17. ಜನರು ಪಾರ್ಶ್ವವಾಯು ರೋಗಿಯನ್ನು ಯೇಸುವಿನ
    (1) ಮನೆಯ ಬಾಗಿಲಿನಿಂದ ತಂದರು (2) ಮನೆಯ ಹೆಂಚು ತೆಗೆದು ಮೇಲಿನಿಂದ ಇಳಿಸಿದರು
18. ಲೇವಿಯನು ಒಬ್ಬ
    (1) ಬೆಸ್ತನು (2) ಸುಂಕದವನು

**ವಿಶೇಷ ಸೂಚನೆ : ಪ್ರತಿ ತಿಂಗಳ 15ನೇ ತಾರೀಕಿನ ಒಳಗೆ ನಮ್ಮ ಕೈಗೆ ನಿಮ್ಮ ಉತ್ತರಗಳು ತಲುಪತಕ್ಕದ್ದು.**

**ಕಳೆದ ಫೆಬ್ರವರಿ ತಿಂಗಳ ಸಂಚಿಕೆ ಸರಿಯಾದ ಉತ್ತರಗಳು**

1) ಯೋವೇಲ. 2:27, 2) ಆಮೋಸ 9:14, 3) ಒಬದ್ಯ 1:15, 4) ಯೋನ 1:3, 5) ಮೀಕ 4:2, 6) ನಹೂಮ 1:15, 7) ಹಬ. 2:10, 8) ಜೆಕರ್ಯ 3:9, 9) ಚೆಫನ್ಯ 1:7, 10) ಹಗ್ಗಾಯ 1:8, 11) ಮಲಾಕಿ 4:6.

**ನಗೆ ಹನಿ**

ಗುಂಡ : ಡಾಕ್ಟ್ರೇ ಈ ಬಕೆಟ್ ಸಿಕ್ಕಾ ಪಟ್ಟೆ ಸೋರುತಿದೆ ....... ರಿಪೇರಿ ಮಾಡಿಕೋಡ್ತೀರಾ ?

ಡಾಕ್ಟರ್ : ಮೂರ್ಖ..... ನಾನ್ಯಾರೂಂತ ಗೊತ್ತಿದೆಯಾ ನಿನಗೆ ?

ಗುಂಡ : ಗೊತ್ತು ಡಾಕ್ಟ್ರೇ.. ನೀವು ಪ್ಲಾಸ್ಟಿಕ್ ಸರ್ಜರಿಯಲ್ಲಿ ಪೇಮಸ್ಸಲ್ವಾ ?.

# ಸಿ. ಎಸ್. ಐ. ಬಾಲಕರ ಬೋರ್ಡಿಂಗ್ ಹೋಮ್
# ಹಳೆ ವಿದ್ಯಾರ್ಥಿಗಳ ಸಂಘ
## (Ex –B.E.M. Boy's Orphanage)

ಮಿಷನ್ ಕಂಪೌಂಡ್, ಉಡುಪಿ – 576101

## ಹಳೆ ವಿದ್ಯಾರ್ಥಿಗಳ ಅವಗಾಹನೆಗಾಗಿ

ಮೇಲ್ಕಂಡ ಬೋರ್ಡಿಂಗ್ ಹೋಮ್‌ನಲ್ಲಿ ವಿದ್ಯಾಭ್ಯಾಸ ಮಾಡಿದ ಹಳೆ ವಿದ್ಯಾರ್ಥಿ ಮಿತ್ರರಾದ ನಾವುಗಳು ಒಂದು ಸಂಘಟನೆಯ ಮೂಲಕ ಹಳೆ ವಿದ್ಯಾರ್ಥಿಗಳನ್ನು ಒಗ್ಗೂಡಿಸಿ, ಸಮಾಜಕ್ಕೆ ಉತ್ತಮ ಕೊಡುಗೆಗಳನ್ನು ನೀಡಲು ಒಂದು ಸಂಘವನ್ನು ಸ್ಥಾಪಿಸಿದ್ದು ಈ ಆಶ್ರಮದಲ್ಲಿ ಈ ಹಿಂದೆ ಬೆಳೆದು ಬಂದ ವಿದ್ಯಾರ್ಥಿಗಳು ತಮ್ಮ ಹೆಸರು, ವಿಳಾಸ, ದೂರವಾಣಿ ಸಂಖ್ಯೆಯ ವಿವರಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸುವಂತೆ ವಿನಂತಿಸುತ್ತೇವೆ ಹಾಗೂ ತಮ್ಮೆಲ್ಲರ ಸಂಪೂರ್ಣ ಸಹಕಾರವನ್ನು ಬಯಸುತ್ತೇವೆ.

**ದಿನಾಂಕ 18–03–2012 ಒಂದು ದಿವಸದ ವಿಶೇಷ ಆರಾಧನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

**ಸ್ಥಳ: ಉಡುಪಿ**

**(ವಾರ್ಡನ್ : 0820–2520679)**

**ಮೊಬೈಲ್ : 9448194894, 9880349668, 9980987999**

ಇ–ಮೈಲ್ : csiemboysorphanageallumni@gmail.com

## ಡಿಜಿಎಮ್ ಬೇತೇಲ್ ಅಂಕಣ

- **40 ದಿವಸದ ಉಪವಾಸ ಪ್ರಾರ್ಥನೆಯು ಕರ್ತನ ಕೃಪೆಯಿಂದಲೂ, ದೇವರ ಆಶೀರ್ವಾದದಿಂದಲೂ ಒಳ್ಳೆಯ ರೀತಿಯಲ್ಲಿ ನಡೆಯಿತು. ಅನೇಕರು ಈ ಉಪವಾಸ ಪ್ರಾರ್ಥನೆಯಲ್ಲಿ ಆಶೀರ್ವಾದ, ಬಿಡುಗಡೆಯನ್ನು ಹೊಂದಿಕೊಂಡರು.**

# ಸಂತೋಷವುಳ್ಳ ಕುಟುಂಬ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

**ಮಹಿಳೆಯರ ಸ್ವರ**

**10) ದೇವರ ವಾಕ್ಯ ಶುದ್ಧೀಕರಿಸುತ್ತದೆ :** (ಯೋಹಾ. 15:3). ಈ ಲೋಕದ ನೀರು ನಮ್ಮ ಶರೀರದ ಕೊಳೆಯನ್ನು ನೀಗಿಸುತ್ತದೆ ಆದರೆ ವಾಕ್ಯವೆಂಬ ನೀರು ನಮ್ಮ ಆತ್ಮಕ್ಕೆ ತಾಗಿದ ಪಾಪವೆಂಬ ಕೊಳೆಯನ್ನು ಶುದ್ಧೀಕರಿಸುತ್ತದೆ. ಒಬ್ಬ ಸಹೋದರಿ ಒಂದು ದಿನ ನನ್ನ ಬಳಿಯಲ್ಲಿ ತನ್ನ ಸಾಕ್ಷಿಯನ್ನು ಹಂಚಿಕೊಂಡರು ನಾನು ದೇವರಿಗೆ ಇಷ್ಟವಿಲ್ಲದ ಕೆಲವು ಕಾರ್ಯಗಳನ್ನು ಮಾಡುತ್ತಿದ್ದೆ. ಅದು ನನಗೆ ಮತ್ತು ದೇವರಿಗೆ ಮಾತ್ರ ಗೊತ್ತು. ಜನರು, ಸಭೆಯವರು, ಮನೆಯವರು ನಾನು ಒಳ್ಳೆ ಭಕ್ತೆ ಎಂದು ತಿಳಿದಿದ್ದರು. ಒಂದು ದಿನ ನಮ್ಮ ಸಭೆಗೆ ಬೇರೆ ಊರಿನಿಂದ ದೇವಸೇವಕರು ಬಂದಿದ್ದರು ಅವರು ಪರಲೋಕದ ಕ್ಯಾಮರದ ಬಗ್ಗೆ ಮಾತನಾಡಿದರು. 24 ಘಂಟೆ ನಮ್ಮನ್ನು ನೋಡುವ ದೇವರ ಬಗ್ಗೆ ಹೇಳಿದರು. ಆ ವಾಕ್ಯ ಕೇಳಿ ನನ್ನಲ್ಲಿ ಪಶ್ಚಾತ್ತಾಪ ಉಂಟಾಯಿತು. ನಾನು ದೇವರಿಗೂ, ಸಭೆಯವರಿಗೂ, ಮನೆಯವರಿಗೂ ವಂಚಿಸುತ್ತಾ ಇದ್ದೇನೆಂಬ ಸತ್ಯ ಗೊತ್ತಾಯಿತು. ಅಲ್ಲೇ ಪಶ್ಚಾತ್ತಾಪದೊಂದಿಗೆ ಕರ್ತನಾದ ಯೇಸುಕ್ರಿಸ್ತನ ಬಳಿಯಲ್ಲಿ ಕ್ಷಮೆ ಕೇಳಿಕೊಂಡೆ ಹಾಗೂ ಇನ್ನು ಪರಿಶುದ್ಧವಾಗಿ ಜೀವಿಸುವ ತೀರ್ಮಾನ ತೆಗೆದುಕೊಂಡೆ. ಅಂದಿನಿಂದ ಇಂದಿನವರೆಗೂ ನನ್ನಿಂದ ಏನಾದರೂ ಚಿಕ್ಕ ತಪ್ಪಾದರೂ ದೇವರು ತನ್ನ ವಾಕ್ಯದ ಮೂಲಕ ನನಗೆ ತೋರಿಸಿಕೊಡುತ್ತಾರೆ. ನಾನು ಒಪ್ಪಿಕೊಂಡು ಅರಿಕೆ ಮಾಡುವಾಗ ದೇವರು ತನ್ನ ವಾಕ್ಯ, ರಕ್ತದಿಂದ ತೊಳೆದು ನನ್ನನ್ನು ಶುದ್ಧಿಮಾಡುತ್ತಾರೆ.

**11) ದೇವರು ವಾಕ್ಯ ಸೃಷ್ಟಿಸುತ್ತದೆ :** ಆದಿ. 1ನೇ ಅಧ್ಯಾಯದಲ್ಲಿ ದೇವರು ತನ್ನ ವಾಕ್ಯದ ಮೂಲಕ ಲೋಕವನ್ನು ಲೋಕದಲ್ಲಿರುವ ಪ್ರತಿಯೊಂದು ಸಂಗತಿಗಳನ್ನು ಸೃಷ್ಟಿಸಿದನು ಎಂದು ನಾವು ಓದುತ್ತೇವೆ. ಇವತ್ತು ನಮಗೆ ಹೊಸದಾಗಿ ಬೇಕಾದದ್ದು

1. ನೂತನ ಹೃದಯ (1 ಸಮು. 10:9–10).
2. ನೂತನ ನಾಲಿಗೆ (ಯೆಶಾ. 6:7).
3. ಶುದ್ಧ ಹೃದಯ (ಕೀರ್ತ. 50:10).
4. ನೂತನ ಬಲ (ಯೆಶಾ. 40:29–31).
5. ಹೊಸ ಮನಸ್ಸು (ಯೆಹೆ. 36:26).
6. ನೂತನ ಸ್ವಭಾವ (ಯೆಹೆ. 11:19).
7. ಅಂತರ್ಯದಲ್ಲಿ ನೂತನ (ಎಫೆ. 4:22–24).
8. ನೂತನ ಸೃಷ್ಟಿ (2 ಕೊರಿ. 5:17).
9. ನೂತನ ಮನಸ್ಸಾಕ್ಷಿ (1 ಪೇತ್ರ. 3:20–21).
10. ನೂತನ ಫಲಗಳು (ಪರಮ. 7:13).

**12) ದೇವರ ವಾಕ್ಯ ಹುಟ್ಟಿಸುತ್ತದೆ (ಯಾಕೋ. 1:18) :** 1 ಪೇತ್ರ. 1:23, ಮಾರ್ಕ. 4:14 ದೇವರ ವಾಕ್ಯವು ಬೀಜವಾಗಿದೆ. ಜೀವವುಳ್ಳ ಬೀಜವನ್ನು ನಾವು ಬಿತ್ತುವುದಾದರೆ ಅದು ಒಂದು ದಿವಸ ಮೊಳಕೆಯೊಡೆದು ಗಿಡವಾಗಿ, ಮರವಾಗಿ ಫಲವನ್ನು ಕೊಡುತ್ತದೆ. ಅದೇ ರೀತಿ ಆದಾಮನ ಪಾಪದಿಂದ ಆತ್ಮದಲ್ಲಿ ಸತ್ತಂತಹ ಮನುಷ್ಯನನ್ನು ದೇವರ ವಾಕ್ಯವೆಂಬ ಬೀಜವು ಪುನ ಹುಟ್ಟಿಸುವಂತದ್ದಾಗಿದೆ.

**6) ಆರಾಧನೆಗೆ ಮಕ್ಕಳನ್ನು ಕರೆದುಕೊಂಡು ಹೋಗಬೇಕು:** ಅನೇಕ ಹೆತ್ತವರು ಆರಾಧನೆಗೆ ಹೋಗುತ್ತಾರೆ. ಆದರೆ ಅವರ ಮಕ್ಕಳನ್ನು ಜೊತೆಗೆ ಕರೆದುಕೊಂಡು ಹೋಗುವುದಿಲ್ಲ. ಮನೆಯಲ್ಲಿಯೂ ಆರಾಧನೆ ಇಲ್ಲ, ವೈಯಕ್ತಿಕ ಜೀವಿತದಲ್ಲಿಯೂ ಇಲ್ಲ, ಸಭೆಯಲ್ಲಿಯೂ ಇಲ್ಲ ಹಾಗದರೆ ಮಕ್ಕಳು ಹಾಳಾಗದೆ ಒಳ್ಳೆದಾಗಲು ಸಾಧ್ಯವೇ? ಯೆಹೋ. 24:15 ರಲ್ಲಿ ಯೆಹೋಶುವನ ತೀರ್ಮಾನ ನಾನು ನನ್ನ ಮನೆಯವರು ಯೆಹೋವನನ್ನು ಸೇವಿಸುವೆವು.

**7) ವಾರಕ್ಕೆ ಒಂದಾವರ್ತಿ ಹೆತ್ತವರು ಮಕ್ಕಳಿಗಾಗಿ ಉಪವಾಸವಿದ್ದು ಪ್ರಾರ್ಥಿಸಬೇಕು:** ದೇವರ ಕೃಪೆಯಿಂದ ನನ್ನ ಪತಿಯವರ ಜೊತೆಯಲ್ಲಿ ಅನೇಕ ದೇಶಗಳನ್ನು ಸುತ್ತಿ ಸೇವೆ ಮಾಡಿ ಬರುವಂತೆ ದೇವರು ಕೃಪೆ ತೋರಿಸಿದ್ದಾನೆ. ಅನೇಕ ತಂದೆ ತಾಯಿಯವರು ತಿಂಗಳಿಗೊಮ್ಮೆ ಅಥವಾ ವಾರಕ್ಕೊಮ್ಮೆ ತಮ್ಮ ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಉಪವಾಸವಿದ್ದು ಪ್ರಾರ್ಥಿಸುವುದನ್ನು ನಾನು ಗಮನಿಸಿದ್ದೇನೆ. ಅವರ ಮಕ್ಕಳನ್ನು ನೋಡುವಾಗ ನಿಜವಾಗಿಯೂ ಬುದ್ಧಿ, ಜ್ಞಾನ, ವಿವೇಕ ಹಾಗೂ ಆರೋಗ್ಯದಿಂದಿರುವುದನ್ನು ಕಾಣಲು ಕರ್ತನು ಕೃಪೆ ತೋರಿಸಿದನು. ನಾನು ಮತ್ತು ನನ್ನ ಪತಿಯವರು ನಮ್ಮ ಮಕ್ಕಳಿಗಾಗಿ ಪ್ರತಿ ಶನಿವಾರ ಉಪವಾಸವಿದ್ದು ಪ್ರಾರ್ಥಿಸುತ್ತೇನೆ. ಕರ್ತನು ನಮ್ಮ ಮಕ್ಕಳನ್ನು ವಿಶೇಷವಾಗಿ ಆಶೀರ್ವದಿಸಿದ್ದಾನೆ.

ಮುಗಿಯಿತು.

ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ
**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

ಭೂಮ್ಯಾಕಾಶಗಳನ್ನು ಉಂಟುಮಾಡಿದ ಯೆಹೋವನ ನಾಮದಲ್ಲಿ ನಮಗೆ ರಕ್ಷಣೆಯಾಗುವದು (ಕೀರ್ತ. 124:8).